## ತಾರತಮ್ಯೋಕ್ತ ಪುರಂದರದಾಸರ ಹಾಡುಗಳು

ರಾಗ – ಮುಖಾರಿ : ತಾಳ – ಝಂಪೆತಾಳ

ನರಹರಿ ತೀರ್ಥರ ಮಹಿಮೆ ಕೇಳಿರೊ
ನರದೇಹವನ್ನು ಸಾರ್ಥಕ ಮಾಡಿರೊ । ಪ ।

ಕಾರ್ಯಸ್ಥ ಬ್ರಹ್ಮ ಮಾಡಿಸಿ ಪೂಜಿಸಿ ಕೊಡಲು
ಆರ್ಯ ಜಾಬಾಲ ಮುನಿಗೆ ಪ್ರಸನ್ನನಾಗಿ
ಭಾರ್ಯಸಹಿತ ಶರ್ವ ಪೂಜಿಸಿ ಸೌಭರಿಗೆ ಕೊಡಲು
ಸೂರ್ಯ ವಂಶಕೆ ರಾಮ ಸೀತೆ ಬರಲು । ೧ ।

ಜಾಂಬವಂತನು ಪೂಜಿಸಿ ವೇದಗರ್ಭಗೆ ಕೊಡಲು
ಕುಂಭೇಶ್ವರನ ಕೋಶದಲ್ಲಿ ಇರಲು
ಅಂಬುಜೋದ್ಭವನಲ್ಲಿ ನಿತ್ಯ ಪೂಜಿಸುತಿರಲು
ಜಂಭಾರಿ ಪುರವನೈದಿದನು ಆಜನಿಪ । ೨ ।

ಗುರು ಆನಂದತೀರ್ಥರಿಂದ ಚತುರಾಶ್ರಮ ಸ್ವೀಕರಿಸಿ
ವರ ಗಗನ ನದೀ ತೀರದಿ ಗುಹ್ಯದೊಳಿರಲು
ಕರಿ ಬಂದು ಕೂಗುತಿರೆ ಕೇಳಿ ಹೊರಗೆ ಬರಲು
ಭರದಿ ಪಟ್ಟಭಿಷಿಕ್ತನಾಗಿ ರಾಷ್ಟ್ರದೊಳೊಪ್ಪಿದ । ೩ ।

ಆ ದೇಶ ಪದವಿ ಹನ್ನೆರಡು ವರುಷ ಮೂರು ಮಾಸ
ಮೋದದಿಂದನುಭವಿಸಿ ರಾಜಪದವ
ಸಾದರದಿ ಪಿಂಗಾಶ್ವಿಜ ಶುದ್ಧ ಸಪ್ತಮಿ
ಆ ಧರಿಯ ರಾಜಪುತ್ರಗೆಯಿತ್ತ ಮಹಿಮ । ೪ ।

ರಾಜಪುತ್ರ ಪತ್ನಿ ನಿಮಗೆ ಬೇಕಾದ ವಸ್ತು ವೈವುದೆನಲು
ಆ ಜನಪನ ಕೋಶದಲ್ಲಿ ಮಂದಾಸನದೊಳು
ರಾಜಿಸುತಿಪ್ಪ ಸೀತಾರಾಮ ಮೂರ್ತಿಗಳನು ತೆಗೆದುಕೊಂಡು
ವಾಜಿಯನೇರಿ ಕೂರ್ಮಕ್ಕೆ ಬಂದು ಪದ್ಮನಾಭರಿಗಿತ್ತನು । ೫ ।

ಪದುಮನಾಭಯತಿ ತಾನು ದಶಮತಿಗೆ ಅರ್ಪಿಸಲು
ಮುದದಿ ಮೂರು ಮಾಸದಿ ಹದಿಮೂರು ದಿನವು
ಮದನನಯ್ಯನ ಪೂಜಿಸಿ ಕೊಡಲು ತಾಂ ಪೂಜಿ

ಸಿದ ಆರು ವರುಷ ಇನ್ನೂರು ತೊಂಭತ್ತು ದಿನ । ೬ ।

ಗುರು ಪದ್ಮನಾಭರಾಜ್ಞದಲ್ಲಿಂದ ಒಂಭತ್ತು
ವರುಷ ಮೇಲೈವತ್ತು ಮೂರುದಿನವು
ಧರಿಣಿ ಜಯ ಮೂಲ ರಾಮನಂಘ್ರಿಯ ಭಜಿಸಿ
**ಪುರಂದರವಿಟ್ಠಲನ** ಪ್ರೀತಿ ಪಡೆದ । ೭ ।

ೞ **ರಾಗ – ಸೌರಾಷ್ಟ್ರ : ತಾಳ – ಝಂಪೆತಾಳ**

ಸತ್ಯ ಜಗತಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕವೆಂದು ಸಾರಿರೈ । ಪ ।

ಜೀವ ಈಶಗೆ ಭೇದ, ಸರ್ವತ್ರ ಜೀವ ಜೀವಕೆ ಭೇದವು
ಜೀವ ಜಡಕೆ, ಜಡಜಡಕೆ ಭೇದ, ಜಡ ಪರಮಾತ್ಮಗೆ । ೧ ।

ಮಾನುಷೋತ್ತಮರಿಗಧಿಕ ಕ್ಷಿತಿಪರು ಮನುಜದೇವಗಂಧರ್ವರು
ಜಾನಪಿತ್ರಾಜಾನಕರ್ಮಜದಾನವಾರಿತತ್ವಾತ್ಮರು । ೨ ।

ಗಣಪಮಿತ್ರರು ಸಪ್ತಋಷಿಗಳು ವಹ್ನಿನಾರದವರುಣರು
ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು । ೩ ।

ದಕ್ಷಸಮ ಅನಿರುದ್ಧಗುರು ಶಚಿರತಿ ಸ್ವಾಯುಂಭುವರಾರ್ವರು
ಕಕ್ಷ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು । ೪ ।

ದೇವ ಇಂದ್ರಂಗಧಿಕ ಮಹರುದ್ರ ರುದ್ರಸಮಶೇಷ ಗರುಡರು
ಕೇವಲಧಿಕರು ಗರುಡಶೇಷರಿಗೆ ದೇವಿಭಾರತಿಸರಸ್ವತಿ । ೫ ।

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು
ವಾಯುಬ್ರಹ್ಮಗೆ ಕೋಟಿಗುಣಗಳಿಂದಧಿಕಶಕ್ತಳು ಶ್ರೀರಮಾ । ೬ ।

ಅನಂತಗುಣಗಳಿಂದ ಲಕುಮಿಗೆ ಅಧಿಕನು **ಶ್ರೀಪುರಂದರವಿಟ್ಠಲನು**
ಘನಸಮರು ಇವಗಿಲ್ಲ ಜಗದೊಳು ಹನುಮಹೃತ್ಪದ್ಮವಾಸಿಗೆ ।@ ।

ಔ ರಾಗ – ನಾಟಿ : ತಾಳ – ತ್ರಿವಿಡೆ ತಾಳ

ಶರಣು ಸಿದ್ಧಿವಿನಾಯಕ ಶರಣು ವಿದ್ಯಾಪ್ರದಾಯಕ ।ಪ।
ಶರಣು ಪಾರ್ವತಿತನಯ ಮೂರುತಿ ಶರಣು ಮೂಷಕವಾಹನ। ಅ ಪ।

ನಿಟಿಲ ನೇತ್ರನ ದೇವಿ ಸುತನೆ ನಾಗಭೂಷಣ ಪ್ರಿಯನೆ
ಕಟಿಕಟಾಂಗದ ಕೋಮಲಾಂಗನೆ ಕರ್ಣಕುಂಡಲಧಾರನೆ ।೧।

ಬಟುವ ಮುತ್ತಿನ ಹಾರ ಪದಕನೆ ಬಾಹು ಹಸ್ತಚತುಷ್ಟನೆ
ಇಟ್ಟ ತೊಡಿಗೆಯು ಹೇಮ ಕಂಕಣ ಪಾಶಾಂಕುಶಧಾರನೆ ।೨।

ಕುಕ್ಷಿ ಮಹಾಲಂಬೋದರನೆ ಇಕ್ಷುಚಾಪನ ಗೆಲಿದನೆ
ಪಕ್ಷಿವಾಹನ ಸಿರಿ **ಪುರಂದರವಿಟ್ಠಲನ** ನಿಜದಾಸನೆ ।೩।

ಔ ರಾಗ – ಪೀಲು : ತಾಳ – ಆದಿತಾಳ

ಗಜವದನ ಬೇಡುವೆ ಗೌರೀತನಯ ।ಪ।
ತ್ರಿಜಗ ವಂದಿತನೆ ಸುಜನರ ಪೊರೆವನೆ ।ಅ ಪ।

ಪಾಶಾಂಕುಶಧರ ಪರಮ ಪವಿತ್ರ
ಮೂಷಕವಾಹನ ಮುನಿಜನ ಪ್ರೇಮ ।೧।

ಮೋದದಿ ನಿನ್ನಯ ಪಾದವ ತೋರೊ
ಸಾಧು ವಂದಿತನೆ ಆದರದಿಂದಲಿ ।೨।
ಸರಸಿಜನಾಭ **ಶ್ರೀ ಪುರಂದರವಿಟ್ಠಲನ**
ನಿರುತ ನೆನೆಯುವಂತೆ ದಯಮಾಡೊ ।೩।

ಔ ರಾಗ – ಕಲ್ಯಾಣಿ : ತಾಳ – ಛಾಪುತಾಳ

ಒಲ್ಲನೊ ಕೃಷ್ಣ ಕೊಳ್ಳನೊ ।ಪ।
ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ ।ಅ ಪ।

ಸಿಂಧು ಶತಕೋಟಿ ಗಂಗೋದಕವಿದ್ದು

ಗಂಧ ಸುಪರಿಮಳ ವಸ್ತ್ರವಿದ್ದು
ಚಂದುಳ್ಳ ಆಭರಣ ಧೂಪದೀಪಗಳಿದ್ದು
ಬೃಂದಾವನ ಶ್ರೀ ತುಳಸಿಯಿಲ್ಲದ ಪೂಜೆ ।೧।

ದಧಿ ಕ್ಷೀರ ಮೊದಲಾದ ಅಭಿಷೇಕಗಳಿದ್ದು
ಮಧುಪರ್ಕ ಪಂಚೋಪಚಾರವಿದ್ದು
ಮುದದಿಂದ ಮುದ್ದು ಶ್ರೀ ಕೃಷ್ಣನ ಪೂಜೆಗೆ
ಸದಮಕಳಾದ ಶ್ರೀ ತುಳಸಿಯಿಲ್ಲದ ಪೂಜೆ ।೨।

ಮಂತ್ರ ಮಹಾ ಮಂತ್ರ ಪುರುಷಸೂಕ್ತಗಳಿದ್ದು
ತಂತು ತಪ್ಪದೆ ತಂತ್ರಸಾರವಿದ್ದು
ಸಂತತ ಸುಖಪೂರ್ಣನ ಪೂಜೆಗ
ತ್ಯಂತ ಪ್ರಿಯಳಾದ ತುಳಸಿಯಿಲ್ಲದ ಪೂಜೆ ।೩।

ಕಮಲ ಮಲ್ಲಿಗೆ ಜಾಜಿ ಸಂಪಿಗೆ ಕೇದಿಗೆ
ವಿಮಲ ಘಂಟೆ ಪಂಚ ವಾದ್ಯಗಳಿದ್ದು
ಅಮಲ ಪಂಚಭಕ್ಷ್ಯ ಪರಮಾನ್ನಗಳಿದ್ದು
ಕಮಲನಾಭಗೆ ಪ್ರಿಯ ಶ್ರೀ ತುಳಸಿಯಿಲ್ಲದ ಪೂಜೆ ।೪।

ಪೂಜೆಯ ಮಾಡದೆ ತುಳಸಿಮಂಜರಿಯಿಂದ
ಮೂಜಗದೊಡೆಯ ಮುರಾರಿಯನು
ರಾಜಾಧಿರಾಜಾಯ ಮಂತ್ರ ಪುಷ್ಪಗಳಿಂದ
ಪೂಜಿಸಿದರು ಒಲ್ಲ **ಪುರಂದರವಿಟ್ಠಲನು** ।೫।

೮ ರಾಗ – ಧನ್ಯಾಸಿ : ತಾಳ – ಆದಿ ತಾಳ

ಚಂದ್ರಚೂಡ ಶಿವಶಂಕರ ಪಾರ್ವತಿರಮಣ ನಿನಗೆ ನಮೋ ।ಪ।
ಸುಂದರ ಮೃಗವರ ಪಿನಾಕಿಧನುಕರ ಗಂಗಾಶಿರ ಗಜಚರ್ಮಾಂಬರಧರ ।ಅ ಪ।

ನಂದಿವಾಹನಾನಂದದಿಂದ ಮೂರ್ಜಗದಿ ಮೆರೆವನು ನೀನೆ
ಅಂದು ಅಮೃತ ಘಟದಿಂದುದಿಸಿದ ವಿಷ ತಂದು ಭುಜಿಸಿದವ ನೀನೆ
ಕಂದರ್ಪನ ಕ್ರೋಧದಿಂದಲಿ ಕೊಂದ ಉಗ್ರನು ನೀನೆ
ಇಂದಿರೇಶ ಶ್ರೀರಾಮನ ನಾಮವ ಚೆಂದದಿ ಪೊಗಳುವ ನೀನೆ।೧।

ಬಾಲಮೃಕಂಡನ ಕಾಲನು ಎಳೆವಾಗ ಪಾಲಿಸಿದವ ನೀನೆ
ವಾಲಯದಿ ಕಪಾಲ ಪಿಡಿದು ಭಿಕ್ಷೆ ಬೇಡೊ ದಿಗಂಬರ ನೀನೆ
ಕಾಲಕೂಟವನು ಪಾನಮಾಡಿದ ನೀಲಕಂಠನು ನೀನೆ
ಜಾಲಮಾಡಿದ ಗೋಪಾಲ ಎಂಬ ಹೆಣ್ಣಿಗೆ ಮರುಳಾದವ ನೀನೆ ।೨।

ಧರೆಗೆ ದಕ್ಷಿಣ ಕಾವೇರಿತೀರ ಕುಂಭಪುರವಾಸನು ನೀನೆ
ಕರದಲಿ ವೀಣೆಯ ಗಾನವ ಮಾಡುವ ಉರಗಭೂಷಣನು ನೀನೆ
ಕೊರಳಲಿ ರುದ್ರಾಕ್ಷಿ ಭಸ್ಮವ ಧರಿಸಿದ ಪರಮವೈಷ್ಣವನು ನೀನೆ
ಗರುಡಗಮನ **ಶ್ರೀಪುರಂದರವಿಟ್ಠಲಗೆ** ಪ್ರಾಣಪ್ರಿಯನು ನೀನೆ ।೩।

ೞ ರಾಗ – ಶಂಕರಾಭರಣ : ತಾಳ – ಆದಿತಾಳ

ಎಂಥಾ ಚಲುವಗೆ ಮಗಳನು ಕೊಟ್ಟನು
ಗಿರಿರಾಜನು ನೋಡಮ್ಮಮ್ಮ ।ಪ।

ಕಂತುಹರ ಶಿವ ಚೆಲುವನೆನ್ನುತ
ಮೆಚ್ಚಿದನು ನೋಡಮ್ಮಮ್ಮ ।ಅ ಪ।

ಮೋರೆ ಐದು ಮೂರು ಕಣ್ಣು ವಿ–
ಪರೀತವ ನೋಡಮ್ಮಮ್ಮ
ಕೊರಳೊಳು ರುಂಡ ಮಾಲೆಯ ಧರಿಸಿದ
ಉರಗಭೂಷಣನ ನೋಡಮ್ಮಮ್ಮ ।೧।

ತಲೆಯೆಂಬೋದು ನೋಡಿದರೆ ಜಡೆ
ಹೊಳೆಯುತಿದೆ ನೋಡಮ್ಮಮ್ಮ
ಹಲವು ಕಾಲದ ತಪಸಿ ರುದ್ರನ
ಮೈಬೂದಿಯ ನೋಡಮ್ಮಮ್ಮ ।೨।

ಭೂತ ಪ್ರೇತ ಪಿಶಾಚಿಗಳೆಲ್ಲ
ಪರಿವಾರವು ನೋಡಮ್ಮಮ್ಮ
ಈತನ ನಾಮವು ಒಂದೇ ಮಂಗಳ
ಮುಪ್ಪುರಹರನ ನೋಡಮ್ಮಮ್ಮ ।೩।

ಮನೆಯೆಂಬೋದು ಸ್ಮಶಾನವು ನೋಡೆ
ಗಜ ಚರ್ಮಾಂಬರವಮ್ಮಮ್ಮ

ಹಣವೊಂದಾದರು ಕೈಯೊಳಗಿಲ್ಲ
ಕಪ್ಪರವನು ನೋಡಮ್ಮಮ್ಮ ।೪।

ನಂದಿವಾಹನ ನೀಲಕಂಠನ
ನಿರ್ಗುಣನ ನೋಡಮ್ಮಮ್ಮ
ಇಂದಿರೆರಮಣ **ಶ್ರೀ ಪುರಂದರವಿಟ್ಠಲನ**
ಪೊಂದಿದವನ ನೋಡಮ್ಮಮ್ಮ ।೫।

ಊ ರಾಗ – ಖರಹರಪ್ರಿಯ : ತಾಳ – ಆದಿತಾಳ

ಭಾರತೀದೇವಿಯ ನೆನೆ ನೆನೆ
ನಿರುತ ಭಕುತಿಗಿದು ಮನೆ ಮನೆ ।ಪ।

ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ
ಸಾರಸಾಕ್ಷಿ ಕೃಪಾಂಗಿ ಅಪಾಂಗಿ ।೧।

ಕಿಂಕಿಣಿಕಿಣಿ ಪಾದಪಂಕಜ ನೂಪುರ
ಕಂಕಣ ಕುಂಡಲಾಲಂಕೃತ ದೇಹೆ ।೨।

ಶಂಕರ ಸುರವರ ವಂದಿತ ಚರಣೆ
ಕಿಂಕರಿ **ಪುರಂದರವಿಟ್ಠಲನ** ಕರುಣೆ ।೩।

ಊ ರಾಗ – ನಟ್ಟ : ತಾಳ – ತ್ರಿವಿಡೆ

ಶರಣು ಭಾರತಿದೇವಿಗೆ
ಶರಣು ವಾಯುರಮಣಿಗೆ ।ಪ।

ಶರಣು ಶರಣರ ಪೊರೆವ ಕರುಣೆಗೆ
ಶರಣು ಸುರವರ ದೇವಿಗೆ ।ಅ ಪ।

ಸುರರು ಮೊದಲಾದವರಿಗೆಲ್ಲ
ಪರಮ ಮಂಗಳವೀವಳೆ
ಚರಣ ಕಮಲಕೆ ಮೊರೆಯ ಹೊಕ್ಕೆನು
ಕರುಣಿಸೆನಗೆ ಮತಿಗಳ ।೧।

ಪಿಂಗಳರೂಪಳೆ ಮಂಗಳ ಮಹಿಮಳೆ
ಹಿಂಗದೆ ಕೊಡು ಹರಿಭಕುತಿಯ
ರಂಗನಾಥ ಪದಾಬ್ಜ ಭೃಂಗನ
ಅಂತರಂಗದ ಪ್ರೀಯಳೆ । ೨ ।
ಪಕ್ಷಿವಾಹನ ಲಕ್ಷ್ಮೀರಮಣನ
ಸಾಕ್ಷಿ **ಪುರಂದರವಿಟ್ಠಲನೋಳ್**
ಅಕ್ಷಯದಿಂದಲಿ ಕೊಟ್ಟು ಭಕುತಿಯ
ರಕ್ಷಿಸೆನ್ನನು ಅನುದಿನ । ೩ ।

ಱ ರಾಗ – ವಸಂತ : ತಾಳ – ಆದಿತಾಳ

ಕೊಡು ಬೇಗ ದಿವ್ಯಮತಿ ಸರಸ್ವತಿ । ಪ ।

ಮೃಡಹರಿಹಯ ಮುಖರೊಡೆಯಳೆ ನಿನ್ನಯ
ಅಡಿಗಳಿಗೆರಗುವೆ ಅಮ್ಮ ಬ್ರಹ್ಮನ ರಾಣಿ । ಅ ಪ ।

ಇಂದಿರಾರಮಣನ ಹಿರಿಯ ಸೊಸೆಯು ನೀನು
ಬಂದೆನ್ನ ವದನದಿ ನಿಂದು ನಾಮವ ನುಡಿಸೆ । ೧ ।

ಅಖಿಳ ವಿದ್ಯಾಭಿಮಾನಿ ಅಜನ ಪಟ್ಟದರಾಣಿ
ಸುಖವಿತ್ತು ಪಾಲಿಸೆ ಸುಜನಶಿರೋಮಣಿ । ೨ ।

ಪತಿತ ಪಾವನೆ ನೀ ಗತಿಯೆಂದು ನಂಬಿದೆ
ವಿತತ ಪುರಂದರವಿಟ್ಠಲನ ತೋರೆ । ೩ ।

ಱ ರಾಗ : ಮುಖಾರಿ , ಆದಿತಾಳ
ಪಾಲಿಸೆಮ್ಮ ಮುದ್ದು ಶಾರದೆ ಎನ್ನ । ನಾಲಿಗೆಯಲಿ ನಿಲ್ಲಬಾರದೆ ॥ ಪ ॥
ಲೋಲಲೋಚನೆ ತಾಯೇ ನಿರುತ ನಂಬಿದೆ ನಿನ್ನ ॥ ಅ. ಪ ॥
ಅಕ್ಷರಕ್ಷರ ವಿವೇಕವ ನಿನ್ನ । ಕುಕ್ಷಿಯೊಳೀರೇಳು ಲೋಕವ ।
ಸಾಕ್ಷಾದ್ರೂಪದಿಂದೊಲಿದು । ರಕ್ಷಿಸು ತಾಯೇ ॥ ೧ ॥
ಶೃಂಗಾರಪುರ ನೀವಾಸಿನಿ ದೇವಿ । ಸಂಗೀತ ಗಾನ ವಿಲಾಸಿನಿ ।
ಮಂಗಳ ಗಾತ್ರಳೆ ಭಳಿರೆ । ಬ್ರಹ್ಮನ ರಾಣಿ ॥ ೨ ॥

ಸರ್ವಾಲಂಕಾರದಂಯಾ ಮೂರುತಿ ನಿನ್ನ । ಚರಣವ ಸ್ತುತಿಸುವೆ ಕೀರುತಿ ।
ಗುರುಮೂರ್ತಿ **ಪುರಂದರ** । **ವಿಠಲ**ನ ಸ್ಮರಿಸುವೆ ॥ ೩ ॥

ಹ ರಾ ಗ – ಕ ಲ್ಯಾ ಣಿ : ತಾ ಳ – ಅ ಟ ತಾ ಳ

ಅಂಜಿಕಿನ್ಯಾತಕಯ್ಯ ಸಜ್ಜನರಿಗೆ
ಭಯವು ಇನ್ಯಾತಕಯ್ಯಾ । ಪ ।

ಸಂಜೀವರಾಯರ ಸ್ಮರಣೆ ಮಾಡಿದಮೇಲೆ । ಅ ಪ ।

ಕನಸಿಲಿ ಮನಸಿಲಿ ಕಳವಳವಾದರೆ
ಹನುಮನ ನೆನೆದರೆ ಹಾರಿಹೋಗದೆ ಭೀತಿ । ೧ ।

ರೋಮ ರೋಮಕೆ ಕೋಟಿ ಲಿಂಗವುದುರಿಸಿದ
ಭೀಮನ ನೆನೆದರೆ ಬಿಟ್ಟು ಹೋಗದೆ ಪಾಪ । ೨ ।

**ಪುರಂದರವಿಟ್ಠಲನ** ಪೂಜೆಯ ಮಾಡುವ
ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ । ೩ ।

ಹ ರಾ ಗ – ಬೇ ಹಾ ಗ್ : ತಾ ಳ – ಆ ದಿ ತಾ ಳ

ಹನುಮನ ಮತವೆ ಹರಿಯ ಮತವೊ । ಪ ।
ಹರಿಯ ಮತವೆ ಹನುಮನ ಮತವೊ । ಅ ಪ ।

ಹನುಮನ ನಂಬಿದ ಸುಗ್ರೀವ ಗೆದ್ದ
ಹನುಮನ ನಂಬದ ವಾಲಿಯು ಬಿದ್ದ । ೧ ।

ಹನುಮನ ನಂಬಿದ ವಿಭೀಷಣ ಗೆದ್ದ
ಹನುಮನ ನಂಬದ ರಾವಣ ಬಿದ್ದ । ೨ ।

ಹನುಮ ಪುರಂದರವಿಟ್ಠಲನ ದಾಸ
**ಪುರಂದರವಿಟ್ಠಲನು** ಹನುಮನೋಳ್ಲಾಸ । ೩ ।

ಹ ರಾಗ – ಕಲ್ಯಾಣಿ

**ಸ್ವಾಮಿ ಮುಖ್ಯ ಪ್ರಾಣ ನಿನ್ನ ಮರೆವರ ಘಂಟಲ ಗಾನಾ**
ಹಿದಿದ್ಯೋ ರಾಮನ ಚರಣ ನೀ ಹೌದೌದೋ ಮುಖ್ಯಪ್ರಾಣ ॥
ಸಂಜೀವನ ಪರ್ವತವ ನೀ ಅಂಜದೆ ತಂದ್ಯೋ ದೇವ್ ।
ಅಂಜನೆ ಸುತ ಸದಾಕಾವ ಹೃತ್ ಕಂಜವಾಸ ಸರ್ವಜೀವ ॥ ೧ ॥
ಏಕಾದಶರ ರುದ್ರ ನೀ ವೈದ್ಯೋರಾಮರ ಮುದ್ರ ।
ಸಕಲ ವಿದ್ಯಾ ಸಮುದ್ರ ನೀ ಹೌದು ಹೌದು ಬಲಭದ್ರ ॥ ೨ ॥
ವೈಕುಂಠದಿಂದ ಬಂದು ನೀ ಪಂಪಾಕ್ಷೇತ್ರದಿ ನಿಂದು ।
ಯಂತ್ರೋದ್ಧಾರಕನೆಂದು ಪುರಂದರ ವಿಠಲ ಸಲಹೆಂದು ॥ ೩ ॥

೮ ರಾಗ – ಪೀಲು : ತಾಳ – ಆದಿ ತಾಳ

ಎಂಥ ಬಲವಂತನೊ ಕುಂತಿಯ ಸುಜಾತನೊ । ಪ ।
ಭಾರತೀಗೆ ಕಾಂತನೊ ನಿತ್ಯ ಶ್ರೀಮಂತನೊ । ಅ ಪ ।

ರಾಮಚಂದ್ರನ ಪ್ರಾಣನೊ ಅಸುರ ಹೃದಯ ಬಾಣನೊ
ಖಳರ ಗಂಟಲ ಗಾಣನೊ ಜಗದೊಳಗೆ ಪ್ರವೀಣನೊ । ೧ ।

ಕುಂತಿಯ ಕಂದನೊ ಸೌಗಂಧಿಕವ ತಂದನೊ
ಕುರುಕ್ಷೇತ್ರಕೆ ಬಂದನೊ ಕೌರವರ ಕೊಂದನೊ । ೨ ।

ಭಂಡಿ ಅನ್ನವನುಂಡನೊ ಬಕನ ಪ್ರಾಣವ ಕೊಂಡನೊ
ಭೀಮ ಪ್ರಚಂಡನೊ ದ್ರೌಪದಿಗೆ ಗಂಡನೊ । ೩ ।

ವೈಷ್ಣವಾಗ್ರಗಣ್ಯನೊ ಸಂಚಿತಾಗ್ರ ಪುಣ್ಯನೊ
ದೇವವರೇಣ್ಯನೊ ದೇವಶರಣ್ಯನೊ । ೪ ।

ಮಧ್ವಶಾಸ್ತ್ರವ ರಚಿಸಿದನೊ ಸದ್ವೈಷ್ಣವರ ಸಲಹಿದನೊ
ಉಡುಪಿ ಕೃಷ್ಣನ ನಿಲಿಸಿದನೊ **ಪುರಂದರವಿಟ್ಠಲನ** ಒಲಿಸಿದನೊ । ೫ ।

ಥ ರಾ ಗ – ಕಾ ಪಿ : ತಾ ಳ – ಛಾ ಪು ತಾ ಳ

ಕರವ ಮುಗಿದ ಮುಖ್ಯಪ್ರಾಣ
ಕರವ ಮುಗಿದ । ಪ ।

ಕರವ ಮುಗಿದ ಶ್ರೀಹರಿಗೆ ಎದುರಾಗಿ
ದುರುಳರ ಸದೆದು ಶರಣರ ಪೊರೆಯೆಂದು । ಅ ಪ ।

ಜೀವೇಶರೈಕ್ಯವು ಜಗತು ಮಿಥ್ಯಾ ಎಂದು
ಈ ವಿಧ ಪೇಳುವ ಮಾಯಿಗಳನಳಿಯೆಂದು । ೧ ।

ಇಲ್ಲಿ ಮಾತ್ರ ಭೇದ ಅಲ್ಲಿ ಒಂದೇ ಎಂಬ
ಕ್ಷುಲ್ಲಕರನು ಹಿಡಿದು ಹಲ್ಲು ಮುರೀಯೆಂದು । ೨ ।

ತಾರತಮ್ಯ ಪಂಚಭೇದ ಸತ್ಯವೆಂಬ
ಮಾರುತ ಮತ ಪೊಂದಿದವರ ನೀ ಕಾಯೆಂದು । ೩ ।

ಪರಿಪರಿ ಜೀವರ ಹೃದಯದೊಳಗೆ ನಿಂತು
ನಿರುತ ಮಾಡುವ ಕರ್ಮ ಹರಿಗೆ ಅರ್ಪಿತವೆಂದು । ೪ ।

ಹರಿ ಮಾಡುವ ವ್ಯಾಪಾರ ಬಲ್ಲ ಕಾರಣನಾಗಿ
ಸಿರಿ **ಪುರಂದರವಿಟ್ಠಲನ** ಚರಣಕ್ಕೆರಗಿ ನಿಂತು । ೫ ।

ಥ ರಾ ಗ – ಮೋ ಹ ನ : ತಾ ಳ – ಆ ದಿ ತಾ ಳ

ಹನುಮ ಭೀಮ ಮಧ್ವ ಮುನಿಯ ನೆನೆದು ಬದುಕಿರೊ
ಅನುಮಾನಂಗಳಿಲ್ಲದಲೆ ಮನೋಭೀಷ್ಟಂಗಳನೀವ । ಪ ।

ಪ್ರಾಣಿಗಳ ಪ್ರಾಣೋದ್ಧಾರ ಜೀವರಲ್ಲುತಮನೊ ಮತ್ತೆ
ಪ್ರಾಣಾಪಾನ ವ್ಯಾನೋದಾನ ಸಮಾನರೋಳುತ್ಕೃಷ್ಟ
ಕ್ಷೋಣಿ ದೈತ್ಯರನ್ನು ಸೀಳಿ ಪಾಲಿಪ ಸಜ್ಜನರನ್ನು
ತ್ರಾಣದಿಂದಲಿ ಮೆರೆವ ಬಹುಜಾಣ ಗುರು ಮುಖ್ಯಪ್ರಾಣ । ೧ ।

ಕಾಮಧೇನು ಚಿಂತಾಮಣಿ ಕಲ್ಪವೃಕ್ಷನಾದ ಸ್ವಾಮಿ
ಪ್ರೇಮದಿಂದಲಿ ನೆನೆಯುವವರ ಭಾಗ್ಯಕ್ಕೆಣೆಯುಂಟೆ
ಸಾಮಾನ್ಯನಲ್ಲವೊ ಈತ ಮೋಕ್ಷಾದಿ ಸಂಪದವಿಗಳಿಗೆ
ಆ ಮಹಾ ಅಪರೋಕ್ಷಜ್ಞಾನ ದಾರಢ್ಯ ಭಕುತಿಯ ಕೊಡುವ ।೨।

ಅವತಾರತ್ರಯಗಳಿಂದ ಶ್ರೀಹರಿಯ ಸೇವಿಸುವ
ತವಕದಿಂದ ಪೂಜಿಪ ಮಹಾಮಹಿಮೆಯುಳ್ಳವನೊ
ಕವಿತಾ ವಾಕ್ಯವಲ್ಲವಿದು ಅವಿವೇಕಿಗಳೆಂದೆಣಿಸದಿರಿ
ಭವ ಬಂಧನವ ಬಿಡಿಸಿ ನಮ್ಮ ಕಾವ **ಪುರಂದರವಿಟ್ಠಲನ** ದಾಸ ।೩।

೮ ರಾಗ – ಮೋಹನ : ತಾಳ – ಅಟತಾಳ

ಹನುಮ ನಮ್ಮ ತಾಯಿತಂದೆ ಭೀಮ ನಮ್ಮ ಬಂಧುಬಳಗ
ಆನಂದತೀರ್ಥರೇ ನಮ್ಮ ಗತಿಗೋತ್ರವಯ್ಯ ।ಪ।

ತಾಯಿತಂದೆ ಹಸುಳೆಗೆ ಸಹಾಯಮಾಡಿ ಸಾಕುವಂತೆ
ಆಯಾಸವಿಲ್ಲದೆ ಸಂಜೀವನವ ತಂದೆ
ಗಾಯಗೊಂಡ ಕಪಿಗಳನ್ನು ಸಾಯದಂತೆ ಪೊರೆದ ರಘು–
ರಾಯನಂಘ್ರಿಗಳೇ ಸಾಕ್ಷಿ ತ್ರೇತಾಯುಗದಿ ।೧।

ಬಂಧುಬಳಗದಂತೆ ಆಪದ್ಬಾಂಧವನಾಗಿ ಪಾರ್ಥನಿಗೆ
ಬಂದ ಬಂದ ದುರಿತಗಳ ಪರಿಹರಿಸಿ
ಅಂಧಕಜಾತರ ಕೊಂದು ನಂದಕಂದಾರ್ಪಣೆಂದ ಗೋ–
ವಿಂದನಂಘ್ರಿಗಳೇ ಸಾಕ್ಷಿ ದ್ವಾಪರಯುಗದಿ ।೨।

ಗತಿಗೋತ್ರರಂತೆ ಸಾಧುತತಿಗಳಿಗೆ ಮತಿಯ ತೋರಿ
ಮತಿಗೆಟ್ಟ ಇಪ್ಪತ್ತೊಂದು ಮತವ ಖಂಡಿಸಿ
ಗತಿಗೆಟ್ಟ ಸದ್ವೈಷ್ಣವರಿಗೆ ಸದ್ಗತಿಯ ತೋರಿದೆ ಪರಮಾತ್ಮ
ಗತಿ **ಪುರಂದರವಿಟ್ಠಲನೆ** ಸಾಕ್ಷಿ ಕಲಿಯುಗದಲ್ಲಿ ।೩।

ϖ ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಕೂಸಿನ ಕಂಡೀರಾ ಮುಖ್ಯ ಪ್ರಾಣನ ಕಂಡೀರಾ ।ಪ।
ಬಾಲನ ಕಂಡೀರಾ ಬಲವಂತನ ಕಂಡೀರಾ ।ಅ ಪ।

ಅಂಜನೆ ಉದರದಿ ಜನಿಸಿತು ಕೂಸು
ರಾಮನ ಪಾದಕ್ಕೆರಗಿತು ಕೂಸು
ಸೀತೆಗೆ ಉಂಗುರ ಕೊಟ್ಟಿತು ಕೂಸು
ಲಂಕಾಪುರವನು ಸುಟ್ಟಿತು ಕೂಸು ।೧।

ಭಂಡೀ ಅನ್ನವ ನುಂಗಿತು ಕೂಸು
ಬಕನ ಪ್ರಾಣವ ಕೊಂಡಿತು ಕೂಸು
ವಿಷದ ಲಡ್ಡುಗೆಯ ಮೆದ್ದಿತು ಕೂಸು
ಮಡದಿಗೆ ಪುಷ್ಪವ ಕೊಟ್ಟಿತು ಕೂಸು ।೨।

ಮಾಯಿಗಳೆಲ್ಲ ಗೆದ್ದಿತು ಕೂಸು
ಮಧ್ವಮತವನುದ್ಧರಿಸಿತು ಕೂಸು
**ಪುರಂದರವಿಟ್ಠಲನ** ದಯದಿಂದ ಕೂಸು
ಸುಮ್ಮನೆ ಉಡುಪಿಲಿ ನಿಂತಿತು ಕೂಸು ।೩।

ϖ ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಬಿಡುವೇನೇನಯ್ಯ ಹನುಮ ಬಿಡುವೇನೇನಯ್ಯ
ನಾ ಸುಮ್ಮನೆ ಬಿಡುವೇನೇನಯ್ಯ ।ಪ।
ಬಿಡುವೇನೇನೊ ಹನುಮ ನಿನ್ನ
ಅಡಿಗಳಿಗೆ ಶಿರವ ಕಟ್ಟಿ
ಒಡೆಯನಲ್ಲಿ ಜ್ಞಾನ ಭಕ್ತಿಯನೆನಗೆ
ಕೊಡುವ ತನಕ ಸುಮ್ಮನೆ ನಿನ್ನ ।ಅ ಪ।

ಹಸ್ತವನೆತ್ತಿದರೇನು
ಹಾರಾಕಾಲನು ಇಟ್ಟರೇನು
ಭೃತ್ಯನು ನಿನ್ನವನು ನಾನು
ಹಸ್ತಿವರದನ ತೋರುವ ತನಕ ।೧।

ಹಲ್ಲು ಮುಡಿಯ ಕಚ್ಚಿದರೇನು
ಅಂಜುವೆನೆ ನಿನಗೆ ನಾನು
ಫುಲ್ಲನಾಭನಲ್ಲಿ ಎನ್ನ
ಮನಸ ನೀ ನಿಲ್ಲಿಸೋ ತನಕ ।೨।

ಡೊಂಕುಮೋರೆ ಬಾಲವ ತಿದ್ದಿ
ಹೂಂಕರಿಸಿದರೆ ಅಂಜುವನಲ್ಲ
ಕಿಂಕರ ನಿನ್ನವನು ನಾನು
**ಪುರಂದರವಿಟ್ಠಲನ** ತೋರುವ ತನಕ ।೩।

ϖ ರಾಗ – ಆನಂದಭೈರವಿ : ತಾಳ – ಅಟತಾಳ

ವೀರ ಹನುಮ ಬಹು ಪರಾಕ್ರಮ ।ಪ।
ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ ।ಅ ಪ।

ರಾಮದೂತನೆನಿಸಿಕೊಂಡೆ ನೀ
ರಾಕ್ಷಸರ ವನವನೆಲ್ಲ ಕಿತ್ತು ಬಂದೆ ನೀ
ಜಾನಕಿಗೆ ಮುದ್ರೆಯಿತ್ತು ಜಗತಿಗೆಲ್ಲ ಹರುಷವಿತ್ತು
ಚೂಡಾಮಣಿಯ ರಾಮಗಿತ್ತು ಲೋಕಕೆ ಮುದ್ದೆನಿಸಿ ಮೆರೆವ ।೧।

ಗೋಪಿಸುತನ ಪಾದ ಪೂಜಿಸಿ
ಗದೆಯ ಧರಿಸಿ ಬಕಾಸುರನ ಸಂಹರಿಸಿದೆ
ದ್ರೌಪದಿಯ ಮೊರೆಯ ಕೇಳಿ ಮತ್ತೆ ಕೀಚಕನ್ನ ಕೊಂದು
ಭೀಮನೆಂಬ ನಾಮ ಧರಿಸಿ ಸಂಗ್ರಾಮಧೀರನಾಗಿ ಜಗದಿ ।೨।

ಮಧ್ಯಗೇಹನಲ್ಲಿ ಜನಿಸಿ ನೀ
ಬಾಲ್ಯದಲ್ಲಿ ಮಸ್ಕರೀಯ ರೂಪಗೊಂಡೆ ನೀ
ಸತ್ಯವತಿಯ ಸುತನ ಭಜಿಸಿ ಸನ್ಮುಖದಿ ಭಾಷ್ಯ ಮಾಡಿ
ಸಜ್ಜನರ ಪೊರೆವ
ಮುದ್ದು **ಪುರಂದರವಿಟ್ಠಲನ ದಾಸ** ।೩।

ϖ ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಘಟಿಕಾಚಲದಿ ನಿಂತ ಶ್ರೀ ಹನುಮಂತ ।ಪ।

ಘಟಿಕಾಚಲದಿ ನಿಂತ ಪಟು ಹನುಮಂತನ
ಪಠನೆಯ ಮಾಡಲುತ್ಕಟದಿ ಪೊರೆವೆನೆಂದು ।ಅ ಪ।

ಚತುರ ಯುಗದಿ ತಾನು ಮುಖ್ಯಪ್ರಾಣನು
ಚತುರಮುಖನಯ್ಯನ
ಚತುರ ಮೂರುತಿಗಳನು ಚತುರತನದಿ ಭಜಿಸಿ
ಚತುರ್ಮುಖನಾಗಿ ಜಗಕೆ ಚತುರ್ವಿಧ ಫಲ ಕೊಡುತೆ ।೧।

ಸರಸಿಜ ಭವಗೋಸ್ಕರ ಕಲ್ಮಷದೂರ
ವರ ಚಕ್ರತೀರ್ಥ ಸರ
ಮೆರೆವಾಚಲದಿ ನಿತ್ಯ ನರಹರಿಗೆದುರಾಗಿ
ಸ್ಥಿರ ಯೋಗಾಸನದಿ ಕರೆದು ವರಗಳ ಕೊಡುತೆ ।೨।

ಶಂಖ ಚಕ್ರವ ಧರಿಸಿ ಭಕ್ತರ ಮನಃ
ಪಂಕವ ಪರಿಹರಿಸಿ
ಪಂಕಜನಾಭ **ಶ್ರೀ ಪುರಂದರವಿಟ್ಠಲನ**
ಬಿಂಕದ ಸೇವಕ ಸಂಕಟ ಕಳೆಯುತ ।೩।

ರಾಗ – ಮಧ್ಯಮಾವತಿ : ತಾಳ – ಆದಿತಾಳ

ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ ಸೌ–
ಭಾಗ್ಯದ ಲಕ್ಷ್ಮಿ ಬಾರಮ್ಮ ।ಪ।

ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ
ಗೆಜ್ಜೆಯ ಕಾಲಿನ ನಾದವ ತೋರುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂದದಿ ।೧।

ಕನಕವೃಷ್ಟಿಯ ಕರೆಯುತ ಬಾರೆ
ಮನಕಾಮನೆಯ ಸಿದ್ಧಿಯ ತೋರೆ
ದಿನಕರ ಕೋಟಿ ತೇಜದಿ ಪೊಳೆಯುವ
ಜನಕರಾಯನ ಕುಮಾರಿ ಬೇಗ ।೨।
ಶಂಕೆಯಿಲ್ಲದ ಭಾಗ್ಯವ ಕೊಟ್ಟು

ಕಂಕಣ ಕೈಯ ತಿರುಹುತ ಬಾರೆ
ಕುಂಕುಮಾಂಕಿತೆ ಪಂಕಜಲೋಚನೆ
ವೆಂಕಟರಮಣನ ಬಿಂಕದ ರಾಣಿ ।೩।
ಅತ್ತಿತ್ತಗಲದೆ ಭಕ್ತರ ಮನೆಯೊಳು
ನಿತ್ಯ ಮಹೋತ್ಸವ ನಿತ್ಯ ಸುಮಂಗಳ
ಸತ್ಯವ ತೋರುತ ಸಾಧು ಸಜ್ಜನರ
ಚಿತ್ತದಿ ಪೊಳೆಯುವ ಪುತ್ಥಳಿ ಬೊಂಬೆ ।೪।

ಸಕ್ಕರೆ ತುಪ್ಪ ಕಾಲುವೆ ಹರಿಸಿ
ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿರಂಗನ
ಚೊಕ್ಕ **ಪುರಂದರವಿಟ್ಠಲನ** ರಾಣಿ ।೫।

## ೮ ರಾಗ – ತೋಡಿ : ತಾಳ – ಅಟತಾಳ

ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೊ ।ಪ।
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು ।ಅ ಪ।

ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ
ಸಾಟಿಯಿಲ್ಲದೆ ಮಾಡಿ ಪೂರ್ಣ ನೋಟದಿಂದ ಸುಖಿಸುತಿಹಳು ।೧।

ಛತ್ರ ಚಾಮರ ವ್ಯಜನ ಪರ್ಯಂಕ ಪಾತ್ರರೂಪದಲ್ಲಿ ನಿಂತು
ಚಿತ್ರಚರಿತನಾದ ಹರಿಯ ನಿತ್ಯಸೇವೆ ಮಾಡುತಿಹಳು ।೨।

ಸರ್ವಸ್ಥಳದಿ ವ್ಯಾಪ್ತನಾದ ಸರ್ವದೋಷರಹಿತನಾದ
ಗರುಡಗಮನನಾದ **ಪುರಂದರವಿಟ್ಠಲನ್ನ** ಸೇವಿಸುತಿಹಳು ।೩।

## ೮ ರಾಗ – ಕಾಂಬೋದಿ : ತಾಳ – ಝಂಪೆತಾಳ

ಏನು ಮೆಚ್ಚಿದೆ ಹೆಣ್ಣೆ ಏನು ಮರುಳಾದೆ
ಏನು ಮೆಚ್ಚಿದೆ ಹೆಣ್ಣೆ ।ಪ।

ನೋಟದಿ ಚೆಲುವನಿವನೆಂಬೆನೆ ಚಂಚಲ
ಮಾಟದಿ ಚೆಲುವನಿವನೆಂಬೆನೆ ಬೆನ್ನಿಲಿ ಬುಗುಟು
ಗೂಟದಂತೆ ಹಲ್ಲು ಮೊಳದುದ್ದದ ಮೋರೆ
ಬೂಟಕತನದಲ್ಲಿ ಬಾಯ್ ತೆರೆದು ಅಂಜಿಪಗೆ ।೧।

ಅಣುರೂಪದವನಿವ ನಿಲುವುಳ್ಳ ನರನಲ್ಲ
ಬನವ ತರಿವವನಂತೆ ಕೈಯಲ್ಲಿ ಕೊಡಲಿ
ಮನುಜರನು ತಾ ಬಿಟ್ಟು ಕಪಿಗಳನು ಕೂಡುವ
ಮನೆಮನೆಯನು ಪೊಕ್ಕು ಕದ್ದು ತಿಂಬುವಗೆ ।೨।

ಗಂಭೀರ ಪುರುಷನಿವನೆಂಬೆನೆ ದಿಗಂಬರ
ಅಂಬರದೊಳಗೆ ಕುದುರೆಯ ಕುಣಿಸುವ
ಅಂಬುಜಾಕ್ಷ ಸಿರಿ **ಪುರಂದರವಿಟ್ಠಲನ**
ಸಂಭ್ರಮದಿ ನೀ ಮೆಚ್ಚಿ ಮದುವ್ಯಾದಲ್ಲ ।೩।

೮　　　　ರಾ ಗ – ಮ ಧ್ಯ ಮಾ ವ ತಿ : ತಾ ಳ – ಆ ದಿ ತಾ ಳ

ಮರುಳು ಮಾಡಿಕೊಂಡೆಯಲ್ಲೆ ಮಾಯಾದೇವಿಯೆ ।ಪ।

ಇರುಳು ಹಗಲು ಏಕವಾಗಿ ಹರಿಯು ನಿನ್ನ ಬಿಡದಿಪ್ಪಂತೆ ।ಅ ಪ।

ಜ್ಞಾನಿಗಳು ನಿತ್ಯ ಅನ್ನಪಾನಾದಿಗಳನ್ನು ಬಿಟ್ಟು
ನಾನಾವಿಧ ತಪವಿದ್ದರು ಧ್ಯಾನಕ್ಕೆ ಸಿಲುಕದವನ ।೧।

ಸರ್ವ ಸಂಗವನು ಬಿಟ್ಟು ಸನ್ಯಾಸಿಯಾದ ಕಾಲಕ್ಕು
ಸರ್ವದಾ ತನ್ನದೆಯ ಮೇಲೆ ಬಿಡದೆ ನಿನ್ನ ಧರಿಸಿಪ್ಪಂತೆ ।೨।

ಪ್ರಳಯಕಾಲದಲ್ಲಿ ಆಲದೆಲೆಯಮೇಲೆ ಮಲಗಿದಾಗ
ಹಲವು ಆಭರಣಗಳು ಜಲವು ಆಗಿ ಜಾಣತನದಿ ।೩।

ರಂಗನು ಭೂಲೋಕದಿ ಭುಜಂಗಗಿರಿಯೊಳಲಮೇಲು
ಮಂಗಪತಿಯಾಗಿ ನಿನ್ನ ಅಂಗೀಕರಿಸುವಂತೆ ।೪।

ಮಕ್ಕಳ ಪಡೆದರೆ ನಿನ್ನ ಚೊಕ್ಕತನವು ಪೋಪುದೆಂದು
ಪೊಕ್ಕಳೊಳು ಮಕ್ಕಳ ಪಡೆದು ಕಕ್ಕುಲಾತಿಪಡುವಂತೆ । ೫ ।

ಎಡಕೆ ಭೂಮಿ ಬಲಕೆ ಶ್ರೀಯು ಎದುರಿನಲ್ಲಿ ದುರ್ಗಾದೇವಿ
ತೊಡೆಯಮೇಲೆ ಲಕುಮಿಯಾಗಿ ಬಿಡದೆ ನಿನ್ನ ಮುದ್ದಾಡಿಪಂತೆ । ೬ ।

ಎಂದೆಂದಿಗೂ ಮರೆಯೆ ನಿನ್ನಾನಂದದಿ ಜನರಿಗೆಲ್ಲ
ತಂದು ತೋರೆ ಸ್ವಾಧೀನ **ಪುರಂದರವಿಟ್ಠಲರಾಯನ** । ೭ ।

ಹ ರಾ ಗ – ಮ ಧ್ಯ ಮಾ ವ ತಿ : ತಾ ಳ – ತ್ರಿ ವಿ ಡೆ

ಮದ್ದು ಮಾಡಲರಿಯೆ ಮುದ್ದು ರಮಾದೇವಿ । ಪ ।
ಮುದ್ದು ಬಾಲಕೃಷ್ಣನಲ್ಲಿ ಮನ ಸಿದ್ಧವಾಗಿ ನಿಲ್ಲುವಂತೆ । ಅ ಪ ।

ವಚನಗಳೆಲ್ಲ ವಾಸುದೇವನ ಕಥೆಯೆಂದು
ರಚನೆ ಮಾಡುವರಲ್ಲಿ ರಕ್ತಿ ನಿಲ್ಲೋ ಹಾಂಗೆ । ೧ ।

ಸಂತೆ ನೆರಹಿದ ಸತಿ ಸುತರು ತನ್ನವರೆಂದು
ಭ್ರಾಂತಿ ಬಿಟ್ಟು ನಿಶ್ಚಿಂತನಾಗೋ ಹಾಂಗೆ । ೨ ।
ಎನ್ನೊಡೆಯ ಸಿರಿ **ಪುರಂದರವಿಟ್ಠಲನ್ನ**
ಸನ್ಮತಿಯಿಂದ ನಾ ಹಾಡಿ ಪಾಡೋ ಹಾಂಗೆ । ೩ ।

ಹ ರಾಗ : ಮೋಹನ, ಅಟ್ಟತಾಳ
ರಂಗ ಬಾರೋ ರಂಗ ಬಾರೋ ರಂಗಯ್ಯ ಬಾರೋ ॥ ಪ ॥
ಪೊನ್ನುಂಗುರವ ನಿನಗೀವೆ ಪನ್ನಂಗಶಯನನೆ ಬಾರೋ ॥ ಅ.ಪ ॥
ವೆಂಕಟರಮಣನೆ ಬಾರೋ ಪಂಕಜಚರಣವ ತೋರೊ ।
ಮುಖುಂದ ಮುಂದೆ ನಿಂದಾಡೋ ಕಿಂಕಿಣಿ ಕಿಣಿಕಿಣಿ ರವದಿಂದ ॥ ೧ ॥
ಬಡನಡುವಿನ ಘಂಟೆ ಬಳುಕಿ ಡಣಡಣಿಸುತ್ತಾ ।
ಕಡಗ ಕಾಲಂದುಗೆ ಗೆಜ್ಜೆ ಅಡಿಗಡಿಗೆ ನಡೆಸುತ್ತಾ ಬಾರೋ ॥ ೨ ॥
ಕೊರಳಿಗ್ಹಾಕಿದ ಹುಲಿಯುಗುರು ತೋರಮುತ್ತಿನ ಹಾರಂಗಳ್ಹೊಳೆಯುತ್ತ ।
ಪರಿಪರಿ ವಿಧಗಳಿಂದ **ಪುರಂದರವಿಠಲ**ನೆ ಬಾರೋ ॥ ೩ ॥

ೞ ರಾ ಗ – ಪೀ ಲು : ತಾ ಳ – ಆ ದಿ ತಾ ಳ

ರಂಗ ಬಾರೊ ಪಾಂಡುರಂಗ ಬಾರೊ ಶ್ರೀ–
ರಂಗ ಬಾರೊ ನರಸಿಂಗ ಬಾರೊ ।ಪ।

ಕಂದ ಬಾರೊ ಎನ್ನ ತಂದೆ ಬಾರೊ
ಇಂದಿರಾರಮಣ ಮುಕುಂದ ಬಾರೊ ।೧।

ಅಪ್ಪ ಬಾರೊ ತಿಮ್ಮಪ್ಪ ಬಾರೊ ಕಂ–
ದರ್ಪನಯ್ಯನೆ ಕಂಚಿವರದ ಬಾರೊ ।೨।

ಅಣ್ಣ ಬಾರೊ ಎನ್ನ ಚಿಣ್ಣ ಬಾರೊ
ಪುಣ್ಯಮೂರ್ತಿ ಮಹಿಷಪುರಿ ಚೆನ್ನ ಬಾರೊ ।೩।

ವಿಷ್ಣು ಬಾರೊ ಉಡುಪಿ ಕೃಷ್ಣ ಬಾರೊ ಎ–
ನ್ನಿಷ್ಟ ಮೂರ್ತಿ **ಪುರಂದರವಿಟ್ಠಲ** ಬಾರೊ ।೪।

ೞ *ರಾಗ : ಮೋಹನ , ಆದಿತಾಳ*

*ಇದೇ ಸಮಯ ರಂಗ ಬಾರೇಲೋ* // ಪ //
*ಇದೇ ಸಮಯ ಕೃಷ್ಣ ಬಾರೇಲೋ* // ಅ.ಪ //
*ಅತ್ತಿಗೆ ಲಕ್ಷ ಬತ್ತಿ ಶೀಲಳೊ । ಅಷ್ಟು ಆಗದವರೆಗವಳೇಳಳೊ ।*
*ಅತ್ತೆ ಪುರಾಣದಿ ಲೋಲಳೊ । ಸರಿಹೊತ್ತಿನ ವೇಳೆಗೆ ಬರುವಳೊ* // ೧ //
*ಮಾವ ಎನ್ನಲ್ಲಿ ಅವಿಶ್ವಾಸಿಯೊ । ಮದ್ವೆಯಾದ ಗಂಡ ಉದಾಸಿಯೊ ।*
*ಭಾವನು ಎನ್ನ ಸೆರಹೇಸಿಯೊ । ನೀ ವೇಳೆಗೆ ಬಂದರೆ ವಾಸಿಯೊ* // ೨ //
*ತಂದೆತಾಯಿಯ ಆಸೆ ಮಾಡೆನು । ಎನ್ನ ಕಂದನ ಮೇಲೆ ಮನಸಿಡೆನು ।*
*ಮಂದರೋದ್ಧರ* ***ಪುರಂದರವಿಠಲ*** *ನೀ । ಬಂದರೆ ಚರಣಸೇವೆ ಮಾಳ್ಪೆನೊ* // ೩ //

ೞ ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ

ವೆಂಕಟರಮಣನೆ ಬಾರೊ । ಶೇಷಾಚಲವಾಸನೆ ಬಾರೊ ।ಪ।
ಪಂಕಜನಾಭ ಪರಮ ಪವಿತ್ರ । ಶಂಕರ ಮಿತ್ರನೆ ಬಾರೊ ।ಅ ಪ।

ಮುದ್ದು ಮುಖದ ಮಗುವೆ ನಿನಗೆ ಮುದ್ದು ಕೊಡುವೆನು ಬಾರೊ

ನಿರ್ದಯವೇಕೊ ನಿನ್ನೊಳಗೆ ನಾನು ಪೊಂದಿದ್ದೇನು ಬಾರೊ ।೧।

ಮಂದರಗಿರಿಯನೆತ್ತಿದ ಆನಂದ ಮೂರ್ತಿಯೆ ಬಾರೊ
ನಂದನ ಕಂದ ಗೋವಿಂದ ಮುಕುಂದ ಇಂದಿರೆಯರಸನೆ ಬಾರೊ ।೨।

ಕಾಮನಯ್ಯ ಕರುಣಾಳೊ ಶ್ಯಾಮಲ ವರ್ಣನೆ ಬಾರೊ
ಕೋಮಲಾಂಗ ಶ್ರೀಪುರಂದರವಿಟ್ಠಲನೆ ಸ್ವಾಮಿ ರಾಯನೆ ಬಾರೊ ।೩।

ϖ ರಾಗ : ಆರಭಿ, ಆದಿತಾಳ

ಲಾಲಿಸಿದಳು ಮಗನ ಯಶೋದೆ ಲಾಲಿಸಿದಳು ಮಗನ ॥ ಪ ॥
ಆರಳೆಲೆ ಮಾಗಾಯಿ ಬೆರಳಿಗುಂಗುರವಿಟ್ಟು ।
ತರಳನ ಮೈಸಿರಿ ತರುಣಿ ನೋಡುತ ಹಿಗ್ಗಿ ॥ ೧ ॥
ಬಾಲಕನ ಕೆನೆ ಹಾಲು ಮೊಸರನೀವೆ ।
ಲೀಲೆಯಿಂದಲಿ ಎನ್ನ ತೋಳ ಮೇಲ್ಮಲಗೆಂದು ॥ ೨ ॥
ಮುಗುಳು ನಗೆಯಿಂದ ಮುದ್ದು ತಾ ತಾರೆಂದು ।
ಜಗದೊಡೆಯನ ಶ್ರೀ **ಪುರಂದರವಿಠಲ**ನ ॥ ೩ ॥

ϖ ರಾಗ – ಮಧ್ಯಮಾವತಿ : ತಾಳ – ಅಟತಾಳ

ಬಂದು ನಿಂದಿಹ ನೋಡಿ, ಭೂತಳದಿ ವೆಂಕಟ
ಇಂದಿರೆಯ ಒಡಗೂಡಿ, ಒಪ್ಪುವ ನಿರಂತರ
ಪೊಂದಿ ಭಜನೆಯ ಮಾಡಿ, ಆನಂದಗೂಡಿ ।ಪ।

ವಂದಿಸುತ ಮನದೊಳಗೆ ಇವನಡಿ
ದ್ವಂದ್ವ ಭಜಿಸಲು ಬಂದ ಭಯಹರ
ಇಂದುಧರ ಸುರವೃಂದನುತ ಗೋ
ವಿಂದ ಘನ ದಯಾಸಿಂಧು ಶ್ರೀಹರಿ ।ಅ ಪ।

ದ್ವಾರದೆಡಬಲದಲ್ಲಿ ಜಯವಿಜಯರಿಬ್ಬರು
ಸೇರಿ ಸೇವಿಪರಲ್ಲಿ ಸನಕಾದಿನುತ ಶೃಂ
ಗಾರ ನಿಧಿ ಅಂಗದಲ್ಲಿ ಮುತ್ತಿನಲಿ ಶೋಭಿಪ
ಹಾರ ಪೊಂದಿಹುದಿಲ್ಲಿ ವಿಸ್ತಾರದಲ್ಲಿ
ವಾರವಾರಕೆ ಪೂಜೆಗೊಂಬುವ
ಹಾರ ಮಕುಟಾಭರಣ ಕುಂಡಲಾಧಾರ ಭುಜ ಕೇ
ಯೂರಭೂಷಿತ ಮಾರಪಿತ ಗುಣ ಮೋಹನಾಂಗ
ಚಾರು ಪೀತಾಂಬರ ಕಟಿ ಕರವೀರ ಕ
ಲ್ಹಾರಾದಿ ಪೂವಿನ ಹಾರ ಕೊರಳೊಳು ಎಸೆಯು
ತಿರೆ ವದನಾರವಿಂದನು ನಗುತ ನಲಿಯುತ　　　　। ೧ ।

ಎಲ್ಲ ಭಕುತರಭೀಷ್ಟ ಕೊಡುವುದಕೆ ತಾ ಕೈ
ವಲ್ಯಸ್ಥಾನವ ಬಿಟ್ಟ ಶೇಷಾದ್ರಿ ಮಂದಿರ
ದಲ್ಲಿ ಲೋಲುಪ ದಿಟ್ಟ ಕಸ್ತೂರಿಯಿಟ್ಟ
ಚೆಲ್ವ ಫಣೆಯಲಿ ಶೋಭಿಸುವ ಸಿರಿ
ವಲ್ಲಭನ ಗುಣ ಪೊಗಳದಿಹ ಜಗ ಖುಲ್ಲರೆದೆದಲ್ಲಣ ಪರಾಕ್ರಮ
ಮಲ್ಲಮರ್ದನ ಮಾತುಳಾರಿ ಫಲ್ಗುಣನ ಸಖ ಪ್ರಕಟನಾಗಿಹ
ದುರ್ಲಭನು ಅಘದೂರ ಬಹುಮಾಂಗಲ್ಯ ಹೃದಯನು ಸೃಷ್ಟಿಗೆ
ಉಲ್ಲಾಸ ಕೊಡುತಲಿ ಚಂದದಿಂದಲಿ　　　　। ೨ ।

ಪದಕ ಕೌಸ್ತುಭಧಾರ ಸರಿಗೆಯ ಕಂಧರ
ಸುದರುಶನದರಧಾರ ಸುಂದರ ಮನೋಹರ
ಪದಯುಗದಿ ನೂಪುರ ಇಟ್ಟಿಹನು
ಸನ್ಮುನಿ ಹೃದಯಸ್ಥಿತ ಗಂಭೀರ ಬಹು ದಾನಶೂರ
ವಿಧಿ ಭವಾದ್ಯರ ಪೊರೆವ ದಾತನು
ತುದಿ ಮೊದಲು ಮಧ್ಯಮ ವಿರಹಿತನು ಉದುಭವಾದಿಗಳೀವ ಕರ್ತನು
ತ್ರಿದಶಪೂಜಿತ ತ್ರಿಭುವನೇಶ ಸದುವಿಲಾಸದಿ ಸ್ವಾಮಿತೀರ್ಥದಿ
ಉದಿಸುತಿರೆ ಸಿರಿ ಮಹಿಳೆ ಸಹಿತದಿ ಪದುಮನಾಭ **ಪುರಂದರವಿಟ್ಠಲ**
ಪ್ರತಿ ವರುಷ ಬ್ರಹ್ಮೋತ್ಸವದಿ ಮೆರೆಯುತ　　　　। ೩ ।

ಱ　　　　ರಾ ಗ – ಬೇ ಹಾ ಗ್ : ತಾ ಳ – ಆ ದಿ ತಾ ಳ

ದೇವ ಬಂದ ನಮ್ಮ ಸ್ವಾಮಿ ಬಂದನೊ
ದೇವರ ದೇವ ಶಿಖಾಮಣಿ ಬಂದನೊ　　　　। ಪ ।

ಉರಗಶಯನ ಬಂದ ಗರುಡಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದ ।೧।

ಮಂದರೋದ್ಧರ ಬಂದ ಮಾಮನೋಹರ ಬಂದ
ಬೃಂದಾವನಪತಿ ಗೋವಿಂದ ಬಂದನೊ ।೨।

ನಕ್ರಹರನು ಬಂದ ಚಕ್ರಧರನು ಬಂದ
ಅಕ್ರೂರಗೊಲಿದ ತ್ರಿವಿಕ್ರಮ ಬಂದನೊ ।೩।
ಪಕ್ಷಿವಾಹನ ಬಂದ ಲಕ್ಷ್ಮಣಾಗ್ರಜ ಬಂದ
ಅಕ್ಷಯ ಫಲದ ಶ್ರೀಲಕ್ಷ್ಮೀರಮಣ ಬಂದ ।೪।

ನಿಗಮಗೋಚರ ಬಂದ ನಿತ್ಯತೃಪ್ತನು ಬಂದ
ನಗೆಮುಖ **ಪುರಂದರವಿಟ್ಠಲ** ಬಂದನೊ ।೫।

ᐯ ರಾಗ – ಪಂತುವರಾಳಿ : ತಾಳ – ಆದಿತಾಳ

ವೈದ್ಯ ಬಂದ ನೋಡಿ ವೆಂಕಟನೆಂಬೊ ।ಪ।

ವೈದ್ಯ ಬಂದ ವೇದವೇದ್ಯ ನೋಡೀಗಲೇ
ಶ್ರೀದೇವಿ ರಮಣನು ಶ್ರೀನಿವಾಸನೆಂಬೊ ।ಅ ಪ।

ಎಷ್ಟು ದಿನದ ರೋಗಗಳೆಂಬುದ ಬಲ್ಲ
ಗಟ್ಟಿಯಾಗಿ ಧಾತು ರಸಗಳ ಬಲ್ಲ ।
ಕಷ್ಟಪಡಿಸದೆನ್ನ ಭವರೋಗ ಬಿಡಿಸುವ
ಶಿಷ್ಟವಾದ ದೇಹ ಕೊಟ್ಟು ಕಾಯುವನೀತ ।೧।

ಹೊನ್ನು ಹಣಂಗಳ ಅನ್ನವನನುಸರಿಸಿ
ತನ್ನ ದಾಸರೆಂಬೊ ನಿಜವ ನೋಡಿ ।
ಚೆನ್ನಾಗಿ ಜಿಹ್ವೆಗೆ ಸ್ವಾದವಾಗಿರುವಂಥ
ತನ್ನ ನಾಮಾಮೃತ ದಿವ್ಯ ಔಷಧವೀವ ।೨।

ಈತ ದಿಟ್ಟಿಸಿ ನೋಡೆ ಎಳ್ಳಷ್ಟು ರೋಗವಿಲ್ಲ
ಈ ತನುವಿಗೆ ಎಂದೆಂದೂ ರೋಗ ಬರಲರಿಯದು ।
ಈತಾನಂತ ರೂಪದಿ ಜೀವರಿಗೆ ಮುನ್ನ
ಪ್ರೀತಿಯಿಂದಲಿ ಭವರೋಗ ಬಿಡಿಸುವ ।೩।

ಧರ್ಮ ವೈದ್ಯನಿವ ಜಗಕೆಲ್ಲ ಒಬ್ಬನೆ
ಮರ್ಮ ಬಲ್ಲ ರೋಗ ಜೀವಂಗಳ ।
ನಿರ್ಮಲವಾಗಿಹ ತನ್ನ ನಾಮಸ್ಮರಣೆ
ಒಮ್ಮೆ ಮಾಡಲು ಭವರೋಗ ಬಿಡಿಸುವ                    । ೪ ।

ಅನ್ಯ ವೈದ್ಯನೇಕೆ ಅನ್ಯ ಔಷಧವೇಕೆ
ಅನ್ಯ ಮಂತ್ರ ತಂತ್ರ ಜಪವೇಕೆ ।
ಚೆನ್ನ **ಶ್ರೀಪುರಂದರವಿಟ್ಠಲನ** ನೆನೆದರೆ
ಮನ್ನಿಸಿ ಸಲಹುವ ವೈದ್ಯ ಶಿರೋಮಣಿ                    । ೫ ।

ರಾಗ – ಮಧ್ಯಮಾವತಿ     ತಾಳ – ಆದಿತಾಳ

**೮ ಧನು ಮುರಿದ ಶ್ರೀ ರಾಮ ಶೌರ್ಯವನು ತೋರಿ**

ಜನಕನ ಸಭೆಯಲ್ಲಿ ಜಾನಕಿಯ ಮನಸೆಳೆದು ॥
ವಸುಧೀಶರೆಲ್ಲಾರು ಅಸುಗೆಟ್ಟು ಕುಳಿತಿರಲು
ದಶಕಂಠಧನುವೆತ್ತಿ ಬಸವಳಿದು ಬಿದ್ದ
ಪಸರಿಸಿತು ಹಾಸ್ಯ ಧ್ವನಿ ನೆರೆ ಸಭೆಯೊಳಗೆಲ್ಲ
ನಸುನಕ್ಕ ವಿಶ್ವಾಮಿತ್ರ ರಾಮನನು ಎಬ್ಬಿಸಿದ          ॥ ೧ ॥

ಶ್ಯಾಮಸುಂದರನೆದ್ದು ಪ್ರೇಮದಿಂ ಮುನಿಗರೆಯೆ
ಆ ಮಹಾಧನುವಿದ್ದ ಸ್ಥಳಕ್ಕೆ ಬಂದು
ಕೋಮಲಾ ಕರಗಳಿಂ ಧನುವೇತ್ತಿ ತಾ ಪಿಡಿದು
ಸಾಮರ್ಥ್ಯದಿಂದೆಳೆಯೆ ಧನು ಮುರಿದು ಎರಡಾಯ್ತು   ॥ ೨ ॥

ಜಯಭೇರಿ ಹೊಡೆಯೀತು ಜಯವಾಯ್ತು ರಾಮಗೆಂದು
ಜಯ ಜಯ ಜಯವೆಂದು ವನಪುಷ್ಪ ಮಳೆಗರೆಯೆ
ಜಯಮಾಲೆ ಹಾಕಿದಳು ಜಾನಕೀ ಓಡಿ ಬಂದು
ಜಯ ಪಡೆದು ನಿಂತ **ಶ್ರೀ ಪುರಂದರ ವಿಠಲ**      ॥ ೩ ॥

---

ೞ    ರಾಗ: ಆನಂದ ಭೈರವಿ         ತಾಳ: ಆದಿತಾಳ

## ಬ್ರಹ್ಮಾದಿಗಳು ಕ್ಷೀರಸಾಗರಕೆ ಪೋಗಿ!

ಬ್ರಹ್ಮಾದಿಗಳು ಕ್ಷೀರಸಾಗರಕೆ ಪೋಗಿ!

ಲಕ್ಷ್ಮಿನಾರಾಯಣನ ಪಾದಕ್ಕೆ ಎರಗಿ!

ಭೂಭಾರ ಹರಣ ಮಾಡ ಬೇಕಾಗಿ!

ಇಳೆಯೊಳು ಮನುಜರ ಅವತಾರವಾಗಿ ಲಾಲಿ !! ॥

ಸೂರ್ಯ ವಂಶದರಾಯ ಅರಸು ದಶರಥಾ!

ಸಂತಾನವಾಗಬೇಕೆಂದು ಚಿಂತಿಸಿದಾ!

ಆಶ್ರಮದಿಂದ ವಶಿಷ್ಟರನೆ ಕರೆಸಿ!

ಪುತ್ರ ಕಾಮೇಷ್ಟಿ ಎಂಬೋ ಯಜ್ಞವನೆ ಮಾಡಿಸಿದಾ!ಲಾಲಿ ! !೧!

ಚೈತ್ರ ಶುದ್ಧ ನವಮಿ ಬುಧವಾರದಲ್ಲಿ!

ಶ್ರೀ ರಾಮ ಜನಿಸಿದಾ ದಶರಥನಲ್ಲಿ!

ಸಂತೋಷವಾಯಿತು ಅಯೋಧ್ಯೆಯಲ್ಲಿ!

ಸೂರ್ಯ ಚಂದ್ರರುಗಳು ಉದಿಸಿದಾರಲ್ಲಿ! ಲಾಲಿ !!    !೨!

ಜಾತ ಕರ್ಮವ ಮಾಡಿ ವಿಪ್ರರನೆ ಕರೆಸಿ!

ಪುಣ್ಯಾವರ್ಚನೆ ಮಾಡಿ ಮಂತ್ರ ಉಚ್ಚರಿಸಿ!

ಗುರು ದಕ್ಷಿಣೆ ಕೊಟ್ಟಾ ಬ್ರಾಹ್ಮಣರಾದರಿಸಿ!

ಸುರರು ಪುಷ್ಪದಾ ಮಳೆಯನ್ನು ಸುರಿಸಿ !! ಲಾಲಿ !     !೩!

---

ನಾಮಕರಣವ ಮಾಡಿ ಸಂತೋಷ ಪಡುತಾ!

ಶ್ರೀ ರಾಮಚಂದ್ರನೆಂದು ಹೆಸರನ್ನೇ ಇಡುತಾ!

ನಾಲ್ಕು ವೇದಗಳು ವಿಸ್ತಾರದಿ ಪಠಿಸುತ್ತಾ!

**ಪುರಂದರ ವಿಟ್ಠಲನ್ನ** ಸಾರಿ ಕೂಗುತ್ತಾ ! ಲಾಲಿ          !೪!

ಲಾಲಿ ಶ್ರೀ ಹಯವದನ ಲಾಲಿ ರಂಗ ವಿಟ್ಠಲಾ

ಲಾಲಿ ಶ್ರೀ ಕಾಂಥ ಲಕ್ಷ್ಮಿ ಸಮೇತಾ ! ಲಾಲಿ !!

ಠ          ರಾ ಗ – ಶ್ರೀ ರಾ ಗ : ತಾ ಳ – ಆ ದಿ ತಾ ಳ

ಆನೆ ಬಂದಿತ್ತಮ್ಮಮ್ಮ । ಮರಿ
ಯಾನೆ ಬಂದಿತ್ತಮ್ಮಮ್ಮ                    । ಪ ।

ತೊಲಗಿರೆ ತೊಲಗಿರೆ ಪರಬ್ರಹ್ಮ
ಬಲು ಸರಪಳಿ ಕಡಕೊಂಡು ಬಂತಮ್ಮ                    । ಅ ಪ ।

ಕಪಟನಾಟಕದ ಮರಿಯಾನೆ । ನಿಕಟ ಸಭೆಯಲಿ ನಿಂತಾನೆ
ಶಕಟನ ಭಂಡಿಯ ಮುರಿದಾನೆ ॥
ಕಪಟನಾಟಕದಿಂದ ಸೋದರ ಮಾವನ ।
ನಕಟಕಟೆನ್ನದೆ ಕೊಂದಾನೆ                    । ೧ ।

ಏಳು ಭುವನವನುಂಡಾನೆ । ಸ್ವಾಮಿ ಬಾಲಕನೆಂಬ ಚೆಲ್ವಾನೆ
ಬಲ್ಲ ಗೋವುಗಳ ಕೂಡೆ ನಲಿದಾನೆ ॥
ಚೆಲುವ ಕಾಳಿಂಗನ ಹೆಡೆಯಲ್ಲಾಡುತ್ತ । ಸೊಬಗು
ಹೆಚ್ಚಿದ ಪಟ್ಟದಾನೆ । ಮದಸೊಕ್ಕಿ ಬರುತಾನೆ                    । ೨ ।

ಭೀಮಾರ್ಜುನರನು ಗೆಲಿಸ್ಯಾನೆ । ಪರಮ ಭಾಗವತರ ಪ್ರೀಯಾನೆ
ಮುದದಿಂದ ಮಥುರೆಲಿ ನಿಂತಾನೆ ॥
ಮದಮುಖದಸುರರ ದಿಗಿಲಿಟ್ಟುಕೊಂಡು ।
ಪದುಮಲೋಚನ **ಪುರಂದರವಿಟ್ಠಲನೆಂಬಾನೆ**                    । ೩ ।

ೞ ರಾ ಗ – ಬೇ ಹಾ ಗ್ : ತಾ ಳ – ಆ ದಿ ತಾ ಳ

ಹರಿ ಕುಣಿದ ನಮ್ಮ ಹರಿ ಕುಣಿದ ।ಪ।

ಅಕಳಂಕ ಚರಿತ ಮಕರ ಕುಂಡಲಧರ
ಸಕಲರ ಪಾಲಿಪ ಹರಿ ಕುಣಿದ ।೧।

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಸರ
ತರಳೆಯರೊಡಗೂಡಿ ಹರಿ ಕುಣಿದ ।೨।

ಅಂದುಗೆ ಪಾಡಗ ಬಿಂದುಲಿ ಬಾಪುರಿ
ಚೆಂದದಿ ನಲಿವುತ ಹರಿ ಕುಣಿದ ।೩।

ಉಟ್ಟ ಪಟ್ಟೆಯ ದಟ್ಟಿ ಇಟ್ಟ ಕಾಂಚಿಯ ದಾಮ
ದಿಟ್ಟ ಮಲ್ಲರ ಗಂಡ ಹರಿ ಕುಣಿದ ।೪।

ಪರಮ ಭಾಗವತರ ಕೇರಿಯೊಳಾಡುವ
ಪುರಂದರವಿಟ್ಠಲ ಹರಿ ಕುಣಿದ ।೫।

ೞ ರಾಗ : ಶಹನ, ಛಾಪುತಾಳ

ಜಯ ಜಾನಕೀ ಕಾಂತ ಜಯ ಸಾಧುಜನ ವಿನುತ ॥ ಪ ॥
ಜಯತು ಮಹಿಮಾನಂತ ಜಯ ಭಾಗ್ಯವಂತ ಜಯ ಜಯ ॥ ಅ.ಪ ॥

ದಶರಥನ ಮಗ ವೀರ ದಶಕಂಠ ಸಂಹಾರ ।
ಪಶುಪತೀಶ್ವರ ಮಿತ್ರ ಪಾವನ ಚರಿತ್ರ ।
ಕುಸುಮಬಾಣ ಸುರೂಪ ಕುಶಲಕೀರ್ತಿ ಕಲಾಪ ।
ಅಸಮ ಸಾಹಸ ಶಿಕ್ಷ ಅಂಬುಜ ದಳಾಕ್ಷ ॥ ೧ ॥

ಸಾಮಗಾನ ವಿಲೋಲ ಸಾಧುಜನ ಪರಿಪಾಲ ।
ಕಾಮಿತಾರ್ಥ ಪ್ರದಾತ ಕೀರ್ತಿ ಸಂಜಾತ ।
ಸೋಮಸೂರ್ಯಪ್ರಕಾಶ ಸಕಲ ಲೋಕಾಧೀಶ ।
ಶ್ರೀಮಹಾ ರಘುವೀರ ಸಿಂಧುಗಂಭೀರ ॥ ೨ ॥

ಸಕಲ ಶಾಸ್ತ್ರ ವಿಚಾರ ಶರಣಜನ ಮಂದಾರ ।
ವಿಕಸಿತಾಂಬುಜವದನ ವಿಶ್ವಮಯ ಸದನ ।
ಸುಕೃತ ಮೋಕ್ಷಾಧೀಶ ಸಾಕೇತಪುರವಾಸ ।
ಭಕ್ತವತ್ಸಲ ರಾಮ **ಪುರಂದರವಿಠಲ** ॥ ೩ ॥

## ϖ ನಾರಸಿಂಹನೆಂಬೊ ದೇವನು

ನಾರಸಿಂಹನೆಂಬೊ ದೇವನು ।
ನಂಬಿದಂಥ ನರರಿಗೆಲ್ಲ ವರವಕೊಡುವನು । ಪ ।

ಆದಿಯಲ್ಲಿ ಲಕ್ಷ್ಮಿಸಹಿತದಿ ಮಲಗಿರಲು । ಬಂದರಾಗ ಸನತ್ ಕುಮಾರರು ।
ಆಗ ದ್ವಾರಪಾಲಕರು ತಡೆಯಲಾಗ ಕೋಪದಿಂದ ।
ಮೂರು ಜನ್ಮದಲ್ಲಿ ನೀವು ಅಸುರರಾಗಿ ಪುಟ್ಟಿರೆಂದರು । ನಾರಸಿಂಹ ॥ ೧ ॥

ದಿತಿಯ ಗರ್ಭದಲ್ಲಿ ಜನಿಸಿದ ಹಿರಣ್ಯಾಕ್ಷ ಹಿರಣ್ಯಕಶಿಪುರೆಂಬ ಭ್ರಾತೃರು ।
ಪೃಥ್ವಿಯನ್ನು ಮುಳುಗಿಸಿದ ಕಾರಣಾದಿ ಶ್ರೀಹರಿಯು ।
ತೃತೀಯ ರೂಪದಿಂದ ಖಳನ ಕೊಂದು ಧರೆಯನುಳಿಹಿದನು । ನಾರಸಿಂಹ ॥ ೨ ॥

ಅನುಜನಾದ ಹಿರಣ್ಯಾಕ್ಷನ ಮರಣವನ್ನು ಕೇಳಿ ಆಗ ನಡೆದ ತಪಸ್ಸಿಗೆ ।
ಹರಿಯ ಮೇಲೆ ಸಿಟ್ಟಿನಿಂದ ಉಗ್ರತಪಸ್ಸನ್ನು ಮಾಡಿ ।
ಬ್ರಹ್ಮನಿಂದ ವರಗಳನ್ನು ಪಡೆದುಕೊಂಡು ಬಂದನಾಗ । ನಾರಸಿಂಹ ॥ ೩ ॥

ಇಂದ್ರಲೋಕ ಸೂರೆ ಮಾಡಿದ । ಮೂರು ಲೋಕಕೆ ಅಸುರ ತನ್ನ ಭಯವ ತೋರಿದ ।
ಗರ್ಭಿಣಿ ಕಯಾದುವನ್ನು ಬ್ರಹ್ಮಪುತ್ರ ಬಂದು ಆಗ ।
ದೈತ್ಯನಾದ ಹಿರಣ್ಯಕಶಿಪುವಿಗೆ ಒಪ್ಪಿಸಿದನು । ನಾರಸಿಂಹ ॥ ೪ ॥

ನವಮಾಸಗಳು ತುಂಬಲು । ಕಯಾದು ಆಗ ಪುತ್ರರತ್ನವನ್ನು ಪಡೆದಳು ।
ನಾಮಕರಣವನ್ನು ಮಾಡಿ ವಿಪ್ರರನ್ನು ಕರೆಸಿ ಬೇಗ ।
ದೈತ್ಯ ತನ್ನ ಸುತಗೆ ಪ್ರಹ್ಲಾದನೆಂದು ಕರೆಸಿದನು । ನಾರಸಿಂಹ ॥ ೫ ॥

ಬಾಲಚಂದ್ರನಂತೆ ಹೊಳೆಯುತಾ ಇರುತಿರಲು ಐದು ವರ್ಷ ತುಂಬಿತಾಗಲೆ ।
ಗುರುಗಳನ್ನು ಕರೆಸಿ ಬೇಗ ಸಕಲ ವಿದ್ಯೆ ಕಲಿಸಿರೆಂದು ।
ಗುರುಗಳಿಗೆ ಮಗನನ್ನು ಒಪ್ಪಿಸಿದ ದೈತ್ಯ ತಾನು । ನಾರಸಿಂಹ ॥ ೬ ॥

ಓಂ ನಮ: ಶಿವಾಯ ಎನುತಲಿ । ಅಸುರ ತನ್ನ ಸುತನ ಬರೆದು ತೋರು ಎನ್ನಲು ।
ನರಹರಿಯ ನಾಮವನ್ನು ನಗುನಗುತಲೆ ಬರೆಯುತಿರಲು ।
ಎಡದ ತೊಡೆಯ ಮೇಲಿದ್ದ ಶಿಶುವ ಬಡಿದು ಧರೆಗೆ ನೂಕಿದನು ॥ ನಾರಸಿಂಹ ॥ ೭ ॥

ಸುತ್ತ ಜನರ ಕರೆಸಿ ಬೇಗದಿ । ಅಸುರ ತನ್ನ ಸುತನ ಕೊಲ್ಲಿಸಬೇಕು ಎಂದಾಗ ।
ಅಟ್ಟ ಅಡವಿಯೊಳು ವಿಷವನಿಟ್ಟು ಭೋಜನಂಗಳ ಮಾಡಿ ।
ಹರಿಯ ಸ್ಮರಣೆ ಮಾತ್ರದಿಂದ ಭುಂಜಿ ತಿಳಿದ ಜಟ್ಟಿಹಾಂಗೆ ॥ ನಾರಸಿಂಹ ॥ ೮ ॥

ಅಂಬುಧಿಯೊಳು ಮಗನ ಮಲಗಿಸಿ । ಮೇಲೆ ದೊಡ್ಡ ಬೆಟ್ಟವನ್ನು ಇಟ್ಟು ಬನ್ನಿರೋ ।
ಹರಿಯ ಕೃಪೆಗೆ ವಶನಾದ ತರಳನೆಂದು ವರುಣದೇವ ।
ಮರಣ ಇಲ್ಲದಹಾಂಗೆ ಮಾಡಿ ಮನೆಗೆ ಕೊಟ್ಟು ಕಳುಹಿದನು ॥ ನಾರಸಿಂಹ ॥ ೯ ॥

ಬೆಟ್ಟದಿಂದ ಕಟ್ಟಿ ಉರುಳಿಸಿ । ಅಸುರ ತನ್ನ ಪಟ್ಟದಾನೆ ಕಾಲಲಿ ಮೆಟ್ಟಿಸಿ ।
ಹರಿವ ಒಲೆಯ ಮಾಡಿ ಸುಟ್ಟು ಹುಲಿಯ ಬೋನಿನಲ್ಲಿ ಇಟ್ಟು ।
ಹತ್ನವಿಲ್ಲದೆ ಸುತನ ಕೊಲ್ಲಲು ಶಕ್ತನಲ್ಲದೆ ಪೋದನಂತೆ ॥ ನಾರಸಿಂಹ ॥ ೧೦ ॥

ನಿನ್ನ ದೇವ ಇದ್ದ ಎಡೆಯನು । ತೋರು ಎನುತ ಪಿತನು ತನ್ನ ಸುತನ ಕೋರಲು ।
ಎನ್ನ ದೇವ ಇಲ್ಲದಂತ ಎಡೆಗಳುಂಟೆ ಲೋಕದಲ್ಲಿ ।
ಕಂಬದಲ್ಲೂ ಇರುವನೆಂದು ಕೈಯ ಮುಗಿದು ತೋರ್ದನಾಗೆ ॥ ನಾರಸಿಂಹ ॥ ೧೧ ॥

ವರಕಂಬವನ್ನು ಒದೆಯಲು । ನರಹರಿಯು ಉಗ್ರಕೋಪವನ್ನು ತಾಳಿದ ।
ಕಟಕಟೆಂಬ ಧ್ವನಿಯ ಮಾಡಿ ನಖಗಳಿಂದ ಪಿಡಿದು ಒತ್ತಿ ।
ಕರುಳ ಬಗೆದು ಮಾಲೆ ಹಾಕಿ ಕಂದ ಭಕ್ತನಪ್ಪಿಕೊಂಡ ॥ ನಾರಸಿಂಹ ॥ ೧೨ ॥

ಅಂತರಿಕ್ಷದಲ್ಲಿ ಅಮರರು । ನೋಡಿ ಆಗ ಪುಷ್ಪವೃಷ್ಟಿಯನ್ನೆ ಕರೆದರು ।
ಅಜನ ಪಡೆದ ದೇವಿ ಬಂದು ತೊಡೆಯ ಮೇಲೆ ಕುಳಿತಿರಲು ।
ಅಮರಪತಿಯರೆಲ್ಲರ ನೋಡಿ ಅಂಜಬೇಡೆಂದಭಯವಿತ್ತ ॥ ನಾರಸಿಂಹ ॥ ೧೩ ॥

ಲಕ್ಷ್ಮಿನಾರಸಿಂಹ ಚರಿತೆಯ । ಉದಯಕಾಲ ಪಠಿಸುವಂತ ನರರಿಗೆಲ್ಲಾ ।
ಪುತ್ರಸಂತಾನಂಗಳಿತ್ತು । ಮತ್ತೆ ಬೇಡಿದಹಾಂಗೆ ಕೊಟ್ಟು ।
ಭಕ್ತವತ್ಸಲ ಮುಕ್ತಿ ಕೊಡುವ । **ಪುರಂದರವಿಠ್ಠಲ**ರಾಯ ॥ ನಾರಸಿಂಹ ॥ ೧೪ ॥

ಠ ರಾಗ – ಮಧ್ಯಮಾವತಿ

**ಅರಿಯರು ಮನುಜರರಿಯರೋ ॥**

ಅರಿಯರೋ ಮನುಜರು ಅರಿತೂ ಅರಿಯರೋ ಧರೆ ಈರೇಳಕ್ಕೆ ಹರಿಯಲ್ಲದಿಲ್ಲವೆಂದು ॥
ನಾರದ ಮುನಿಬಲ್ಲ ವಾರಿಜೋದ್ಭವಬಲ್ಲ ।
ಪಾರಾಶರ ಬಲ್ಲ ಮನು ಬಲ್ಲನು ॥
ಧೀರ ಭೀಷ್ಮನು ಬಲ್ಲ ಪಾರ್ವತಿ ಬಲ್ಲಳು ।
ಕಾರುಣಿಕನು ಶ್ರೀ ಹರಿಯಲ್ಲದಿಲ್ಲವೆಂದು ॥ ೧ ॥
ಶಿವ ಬಲ್ಲ್ ದ್ರುವ ಬಲ್ಲ ದ್ರೌಪದೀಬಲ್ಲಳು ।
ಅವನಿಪಾಲಕ ಜನಕ ನೃಪಬಲ್ಲನು ।
ಯುವತಿಗೆ ಶಾಪವಿತ್ತ ಗೌತಮ ಮುನಿ ಬಲ್ಲ ।
ಸಿಟ್ಟಿನಿಂದ ಒದ್ದ ಭೃಗು ಬಲ್ಲನು ॥ ೨ ॥
ಕೊಟ್ಟ ಬಲಿ ಬಲ್ಲ ಮೊರೆಯಿಟ್ಟ ಗಜೇಂದ್ರ ಬಲ್ಲ
ಸೃಷ್ಟೀಶ ಪುರಂದರ ವಿಠಲನೇ ದೈವವೆಂದು ॥ ೩ ॥

ಠ ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಇವನ ಹಿಡಿದುಕೊಂಡು ಹೋಗೆಲೊ ಜೋಗಿ । ಪ ।

ಇವ ನಮ್ಮ ಮಾತ ಕೇಳದೆ ಪುಂಡನಾದ । ಅ ಪ ।

ಆಡುತಾಡುತ ಪೋಗಿ ನೀರೊಳು ಮುಳುಗಿದ
ಬೇಡವೆಂದರೆ ಬೆಟ್ಟ ಬೆನ್ನಲಿ ಹೊತ್ತ
ದಾಡೆಯ ಮೇಲೆ ತಾ ಧಾರಿಣಿ ನೆಗೆಹಿದ
ಹಿಡಿಯ ಹೋದರೆ ಬಾಯ ತೆರೆದು ಅಂಜಿಸಿದ । ೧ ।

ಹುಲ್ಲಲ್ಲಿ ವಿಪ್ರನ ಕಣ್ಣು ತಿವಿದ ಬುದ್ಧಿ
ಇಲ್ಲವೆಂದರೆ ಕೈಲಿ ಕೊಡಲಿಯ ಪಿಡಿದ
ಬಿಲ್ಲು ಹಿಡಿದು ರಕ್ಕಸರನು ಸವರಿದ
ಬಲ್ಲಿದ ಮಾವನ ಶಿರವನು ತರಿದ । ೨ ।

ಬತ್ತಲೆ ಕುದುರೆಯ ಹತ್ತಬೇಡೆಂದರೆ
ಹತ್ತಿದನೊ ಇವ ಛಲದಿಂದ

ಭಕ್ತವತ್ಸಲ ಸಿರಿ **ಪುರಂದರವಿಟ್ಠಲನ**
ಎತ್ತಲಾದರು ಕೊಂಡು ಹೋಗೆಲೊ ಜೋಗಿ ।೩।

ರಾ ಗ – ಮು ಖಾ ರಿ : ತಾ ಳ – ಅ ಟ ತಾ ಳ

ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಬೆ ।ಪ।

ಕಂಡೆ ತಿರುಪತಿ ವೆಂಕಟೇಶನ ಕಾರಣಾತ್ಮಕ ಸಾರ್ವಭೌಮನ
ಕಾಮಿತಾರ್ಥಗಳೀವ ದೇವನ ಕರುಣನಿಧಿ ಎಂದೆನಿಸಿ ಮೆರೆವನ ।ಅ ಪ।

ಕೋಟಿ ಸೂರ್ಯಪ್ರಕಾಶವೆನಿಪ ಕಿರೀಟವನು ಮಸ್ತಕದಿ ಕಂಡೆನು
ನೋಟಕಾಶ್ಚರ್ಯವಾದ ನಗೆ ಮುಖ ನೊಸಲಿನಲಿ ತಿರುಮಣಿಯ ಕಂಡೆನು
ಸಾಟಿಯಿಲ್ಲದೆ ಚತುರ ಹಸ್ತದಿ ಶಂಖ ಚಕ್ರ ಗದಾಬ್ಜ ಕಂಡೆನು
ಬೂಟಕದ ಮಾತಲ್ಲ ಕಾಣಿರೊ ಭೂರಿ ದೈವರ ಗಂಡನಂಘ್ರಿಯ ।೧।

ತಪ್ಪು ಕಾಣಿಕೆ ಕಪ್ಪಗಳನು ಸಪ್ತದ್ವೀಪಗಳಿಂದ ತರಿಸುವ
ಉಪ್ಪು ಓಗರಗಳನೆ ಮಾರಿಸಿ ಉಚಿತದಿಂದಲಿ ಹಣವ ಗಳಿಸುವ
ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯ ಮಾಡಿಕೊಡಿಸುವ
ಸರ್ಪಶಯನನ ಸಾರ್ವಭೌಮನ ಅಪ್ಪ ವೆಂಕಟರಮಣನಂಘ್ರಿಯ ।೨।

ಉರದಿ ಸಿರಿದೇವಿಯಿರಲು ಕಂಡೆನು ಉನ್ನತದಿ ಕೌಸ್ತುಭವ ಕಂಡೆನು
ಗರುಡ ಕಿನ್ನರ ನಾರದಾದಿ ಗಂಧರ್ವರೆಡ ಬಲದಲ್ಲಿ ಕಂಡೆನು
ತೆರತೆರದಿ ಭಕ್ತರಿಗೆ ವರಗಳ ಕರೆದು ಕೊಡುವುದ ನಾನು ಕಂಡೆನು
ಶರಧಿಶಯನನ ಸಾರ್ವಭೌಮನ **ವರದಪುರಂದರವಿಟ್ಠಲನಂಘ್ರಿಯ** ।೩।

• ರಾ ಗ – ಕಾ ಂ ಬೋ ದಿ : ತಾ ಳ – ಝ ಂ ಪೆ ತಾ ಳ

ಈ ಪರಿಯ ಸೊಬಗು ಇನ್ನಾವ ದೇವರಲಿ ಕಾಣೆ ।ಪ।

ಗೋಪೀಜನಪ್ರಿಯ ಗೋಪಾಲಗಲ್ಲದೆ ।ಅ ಪ।

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ
ಸಿರಿಯತನದಲಿ ನೋಡೆ ಶ್ರೀಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವುತನದಲಿ ನೋಡೆ ಜಗದಾದಿಗುರುವು ।೧।

ಪಾವನತ್ವದಿ ನೋಡೆ ಅಮರಗಂಗಾಜನಕ
ದೇವತ್ವದಲಿ ನೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ
ಆವ ಧೈರ್ಯದಿ ನೋಡೆ ಅಸುರಾಂತಕ ।೨।

ಗಗನದಲಿ ಸಂಚರಿಪ ಗರುಡ ದೇವನೆ ತುರಗ
ಜಗತೀಧರ ಶೇಷಪರಿಯಂಕ ಶಯನ
ನಿಗಮಗೋಚರ **ಪುರಂದರವಿಟ್ಠಲಗಲ್ಲದೆ**
ಮಿಗಿಲಾದ ದೈವಗಳಿಗೀಭಾಗ್ಯವುಂಟೆ ।೩।

- ರಾಗ – ಜೋಗ : ತಾಳ – ಆದಿತಾಳ

ಗೋವಿಂದ, ನಿನ್ನಾನಂದ । ಸಾಧನ ಸಕಲವೊ ನಿನ್ನಾನಂದ ।ಪ।

ಅಣುರೇಣು ತೃಣಕಾಷ್ಠ ಪರಿಪೂರ್ಣ ಗೋವಿಂದ
ನಿರ್ಮಲಾತ್ಮಕನಾಗಿ ಇರುವುದೆ ಆನಂದ ।೧।

ಸೃಷ್ಟಿ ಸ್ಥಿತಿ ಲಯ ಕಾರಣ ಗೋವಿಂದ
ಈ ಪರಿ ಮಹಿಮೆಯ ತಿಳಿಯೋದೆ ಆನಂದ ।೨।

ಮಂಗಳಮಹಿಮ **ಶ್ರೀಪುರಂದರವಿಟ್ಠಲ**
ಹಿಂಗದೆ ದಾಸರ ಸಲಹೋದೆ ಆನಂದ ।೩।

- ರಾಗ – ಆನಂದಭೈರವಿ : ತಾಳ – ಆದಿತಾಳ

ಶ್ರೀನಿವಾಸ ನೀನೆ ಪಾಲಿಸೊ ಶ್ರಿತಜನಪಾಲ
ಗಾನಲೋಲ ಶ್ರೀಮುಕುಂದನೆ ।ಪ।

ಧ್ಯಾನಮಾಳ್ಪ ಸಜ್ಜನರ ಮಾನದಿಂ ಪರಿಪಾಲಿಪ
ವೇಣುಗೋಪಾಲ ಗೋವಿಂದ ವೇದವೇದ್ಯ ನಿತ್ಯಾನಂದ ।ಅ ಪ।

ಎಂದಿಗೆ ನಿನ್ನ ಪಾದಾಬ್ಜವ ಪೊಂದುವ ಸುಖ
ಎಂದಿಗೆ ಲಭ್ಯವೊ ಮಾಧವ
ಅಂಧಕಾರಣ್ಯದಲ್ಲಿ ನಿಂದು ತತ್ತರಿಸುತಿಹೆನೊ
ಅಂದದಿಂ ಈ ಭವದೊಳು ಬೆಂದು ನೊಂದೆನೊ ಮುಕುಂದ ।೧।

ಎಷ್ಟು ದಿನ ಕಷ್ಟಪಡುವುದೊ ಯಶೋದೆಕಂದ
ದೃಷ್ಟಿಯಿಂದ ನೋಡಲಾಗದೊ
ಮುಟ್ಟಿ ನಿನ್ನ ಭಜಿಸಲಾರೆ, ಕೆಟ್ಟ ಈ ನರಜನ್ಮದೊಳು
ದುಷ್ಟಕಾರ್ಯ ಮಾಡಿದಾಗ್ಯೂ ಇಷ್ಟನಾಗಿ ಕೈಯ ಪಿಡಿದು ।೨।

ಅನುದಿನ ಅನೇಕ ರೋಗಗಳ ಅನುಭವಿಸಿದೆನೊ
ಘನ್ನ ಮಹಿಮ ನೀನೆ ಕೇಳಯ್ಯ
ತನುವಿನಲ್ಲಿ ಬಲವಿಲ್ಲ, ನೆನೆದ ಮಾತ್ರ ಸಲಹುವ
ಹನುಮದೀಶ **ಪುರಂದರವಿಟ್ಠಲನೆ** ಕೈಯ ಪಿಡಿದು ।೩।

- ರಾಗ – ಅಠಾಣ : ತಾಳ – ಛಾಪು ತಾಳ

ಸ್ಮರಣೆಯೊಂದೆ ಸಾಲದೆ, ಗೋವಿಂದನ
ಸ್ಮರಣೆ ಒಂದೇ ಸಾಲದೆ ।ಪ।

ಪರಿಪರಿ ವಿಧವೆಲ್ಲ ಭ್ರಾಂತಿಯೆಂದು ತಿಳಿದು
ಪರಮಪುರುಷ ಹರಿಯ ನೆರೆ ನಂಬಿದವರಿಗೆ ।ಅ ಪ।

ಪಾತಕಿಯಾದರೇನೊ ಸರ್ವಪ್ರಾಣಿ
ಘಾತಕಿಯಾದರೇನೊ
ನೀತಿಯ ಬಿಟ್ಟು ದುಷ್ಕರ್ಮಿಯಾದರೇನೊ
ಪ್ರೀತಿಯಿಂದಜಾಮಿಳನ ಸಲಹಿದ ಹರಿಯ ।೧।

ಕಡುಮೂರ್ಖನಾದರೇನೊ ದುಷ್ಕರ್ಮವ
ಹಿಡಿದಾತನಾದರೇನೊ
ಜಡನಾದರೇನಲ್ಪ ಜಾತಿಯಾದರೇನೊ
ಬಿಡದೆ ಪ್ರಹ್ಲಾದನ ಸಲಹಿದ ಹರಿಯ ।೨।

ಸಕಲ ತೀರ್ಥಕ್ಷೇತ್ರದಿ ಮಾಡಿದಂಥ
ನಿಖಿಳ ಪುಣ್ಯದ ಫಲವು
ಭಕುತಿ ಪೂರ್ವಕವಾಗಿ ಬಿಡದನುದಿನದಲ್ಲಿ
ಪ್ರಕಟ **ಪುರಂದರವಿಟ್ಠಲನ** ನಾಮ ।೩।

• ರಾಗ – ಮಧ್ಯಮಾವತಿ : ತಾಳ – ಆದಿತಾಳ

ರಾಮ ಮಂತ್ರವ ಜಪಿಸೊ ಏ ಮನುಜ
ರಾಮ ಮಂತ್ರವ ಜಪಿಸೊ ।ಪ।

ಆ ಮಂತ್ರ ಈ ಮಂತ್ರ ಜಪಿಸಿ ನೀ ಕೆಡಬೇಡ
ಸೋಮಶೇಖರ ತನ್ನ ಭಾಮೆಗೆ ಪೇಳಿದ ಮಂತ್ರ ।ಅ ಪ।

ಕುಲಹೀನನಾದರು ಕೂಗಿ ಜಪಿಸುವ ಮಂತ್ರ
ಜಲಜಪಾಣಿ ನಿತ್ಯ ಜಪಿಸುವ ಮಂತ್ರ
ಕಲುಷ ಪರ್ವತಕಿದು ಕುಲಿಶವಾಗಿಹ ಮಂತ್ರ
ಸುಲಭದಿಂದಲಿ ಮೋಕ್ಷ ಸೂರೆಗೊಂಬುವ ಮಂತ್ರ ।೧।
ಸ್ನಾನ ಮೌನಂಗಳಿಗೆ ಸಾಧನದ ಮಂತ್ರ
ಜ್ಞಾನಿಗಳು ಮನದಿ ಧ್ಯಾನಿಪ ಮಂತ್ರ
ಹೀನ ಗುಣಂಗಳ ಹಿಂಗಿಸುವ ಮಂತ್ರ
ಏನೆಂಬೆ ವಿಭೀಷಣಗೆ ಪಟ್ಟಗಟ್ಟಿದ ಮಂತ್ರ ।೨।

ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ
ಮುಕುತಿ ಮಾರ್ಗಕೆ ಇದೇ ಮೂಲ ಮಂತ್ರ
ಭಕುತಿ ರಸಕೆ ಬಟ್ಟೆ ಒಮ್ಮೆ ತೋರುವ ಮಂತ್ರ
ಸುಖನಿಧಿ **ಪುರಂದರವಿಟ್ಠಲನ** ಮಹಾಮಂತ್ರ

• ರಾಗ – ಪಂತುವರಾಳಿ : ತಾಳ – ಅಟತಾಳ

ನಿನ್ನ ನಾಮವಿದ್ದರೆ ಸಾಕೊ ।ಪ।
ಮುನಿದರೆ ಮುನಿ ನಿನ್ನಾಣೆ ಶ್ರೀರಾಮ ।ಅ ಪ।

ಹೊದ್ದಿದ ಪಾಪವನೆಲ್ಲ। ಛಿನ್ನ
ಛಿದ್ರವ ಮಾಡಿ ಖಂಡಿಸಿ ಬಿಡುವ ॥

ಎದ್ದರೆ ಸಂಗಡ ಬರುವ । ಎನ್ನ
ಮುದ್ದಿಸಿ ಮುಂದಕೆ ಮುಕ್ತಿಯ ಕೊಡುವ । ೧ ।

ಸಾರೆ ಸಂಗಡ ಬರುವ । ಎನ್ನ
ಸೇರಿದ ಪಾಪವ ಕೋಪದಿ ತರಿವ ॥
ಝಾಡಿಸಿ ಕರ್ಮವ ಕಳೆವ । ಎನ್ನ
ಕೂಡಿಕೊಂಡು ವೈಕುಂಠಕ್ಕೆ ನಡೆವ । ೨ ।

ಪರಮಾನಂದವವೀವ । ನಿನ್ನ
ಸ್ಮರಣೆಯೆಂಬುದು ಎನ್ನ ಜೀವಕ್ಕೆ ಜೀವ ॥
ವರವ ಕೊಡುವುದೊಂದು ಭಾವ । ಈ
ಪರಿ ಪುಸಿಯಲ್ಲ **ಶ್ರೀ ಪುರಂದರವಿಟ್ಠಲ** । ೩ ।

ಔ ರಾಗ – ಶಂಕರಾಭರಣ : ತಾಳ – ತ್ರಿತಾಳ

ಎನಗೂ ಆಣೆ ರಂಗ ನಿನಗೂ ಆಣೆ । ಪ ।
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ । ಅ ಪ ।

ನಿನ್ನ ಬಿಟ್ಟು ಅನ್ಯರ ಭಜಿಸಿದರೆ ಎನಗೆ ಆಣೆ, ರಂಗ
ಎನ್ನ ನೀ ಕೈಬಿಟ್ಟು ಪೋದರೆ ನಿನಗೆ ಆಣೆ । ೧ ।

ತನುಮನಧನದಲಿ ವಂಚಕನಾದರೆ ಎನಗೆ ಆಣೆ, ರಂಗ
ಮನಸು ನಿನ್ನಲಿ ನಿಲಿಸದಿದ್ದರೆ ನಿನಗೆ ಆಣೆ । ೨ ।

ಕಾಕು ಮನುಜರ ಸಂಗವ ಮಾಡಿದರೆನೆಗೆ ಆಣೆ, ರಂಗ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ । ೩ ।

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ, ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ । ೪ ।

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ, ರಂಗ
**ಪುರಂದರವಿಟ್ಠಲ** ನೀನೊಲಿಯದಿದ್ದರೆ ನಿನಗೆ ಆಣೆ । ೫ ।

---

ಶ **ರಾಗ : ಕಾಂಬೊದಿ, ಝಂಪೆತಾಳ**

ಸುಲಭ ಪೂಜೆಯ ಮಾಡಿ ಬಲವಿಲ್ಲದವರು ॥ ಪ ॥
ನಳಿನನಾಭನ ಪಾದ ನಳಿನ ಸೇವಕರು ॥ ಅ.ಪ ॥

ಇರುಳು ಹಚ್ಚುವ ದೀಪ ಹರಿಗೆ ನೀರಾಜನವು ।
ಮರೆಮಾಡುವ ವಸ್ತ್ರ ಪರಮ ಮಡಿಯು ।
ತಿರುಗಾಡಿ ದಣಿಯುವುದೆ ಹರಿಗೆ ಪ್ರದಕ್ಷಿಣೆಯು ।
ಹೊರಳಿ ಮಲಗುವುದೆಲ್ಲ ಹರಿಗೆ ವಂದನೆಯು ॥ ೧ ॥

ನುಡಿವ ಮಾತುಗಳೆಲ್ಲ ಕಡಲಶಯನನ ಜಪವು ।
ಮಡದಿ ಮಕ್ಕಳು ಮತ್ತೆ ಒಡನೆ ಪರಿವಾರವು ।
ನಡುಮನೆಯು ಅಂಗಳವು ಉಡುಪಿ ಭೂ ವೈಕುಂಠ ।
ಎಡ ಬಲದ ಮನೆಯವರು ಕಡುಭಾಗವತರು ॥ ೨ ॥

ಹೀಗೆ ಅನುದಿನ ತಿಳಿದು ಹಿಗ್ಗುವ ಜನರ ಭವ– ।
ರೋಗ ಪರಿಹರವು ಮೂಜಗದಿ ಸುಖವು ।
ಹೋಗುತಿದೆ ಈ ಆಯು ಬೇಗದಿಂದಲಿ ನಮ್ಮ ।
ಯೋಗೇಶ **ಪುರಂದರವಿಠಲನ** ನೆನೆನೆನೆದು ॥ ೩ ॥

♣ **ರಾಗ – ಪಂತುರಾವಳಿ** **ತಾಳ – ಆದಿತಾಳ**

ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ ॥ಪ॥
ಸಮ್ಮತಿಂದ ನಾವು ನೀವು ಸಾಟಿ ಮಾಡಿ ನೋಡುವ ಬನ್ನಿ ॥ಅ.ಪ॥
ಹೇಮ ಹೊನ್ನು ಹಣಗಳಿಗೆ ಹೇರಳ ಭಯಗಳುಂಟು ।
ರಾಮನಾಮದ್ರವ್ಯಕಿನ್ನು ಯಾರ ಭಯವಿಲ್ಲವಯ್ಯ ॥೧॥
ಕಡಗ ಕಂಠಮಾಲೆಗಳಿಗೆ ಕಳ್ಳರ ಅಂಜಿಕೆಯುಂಟು ।
ಅಡವಿ ತುಳಸಿಮಾಲೆಗಳನ್ನು ಆರ ಅಂಜಿಕೆಲ್ಲವಯ್ಯ ॥೨॥
ವ್ಯಾಪಾರ ಉದ್ಯೋಗಕಿನ್ನು ವ್ಯಾಕುಲದ ಭಯವುಂಟು ।
ಗೋಪಾಳದ ವೃತ್ತಿಗಿನ್ನು ಗೊಡವೆ ಯಾರದಿಲ್ಲವಯ್ಯಾ ॥೩॥

ಸರಕು ಬೆಲ್ಲ ತುಪ್ಪ ಧಾನ್ಯ ಸವೆದೀತೆಂಬ ಚಿಂತೆಯುಂಟು ।
ಹರಿನಾಮಾಮೃತಕೆ ಇನ್ನು ಯಾವ ಚಿಂತೆಯಿಲ್ಲವಯ್ಯ ॥೪॥
ನಿಮ್ಮ ಭಾಗ್ಯ ಲಕ್ಷ್ಮೀ ದೇವಿ ನಮ್ಮ ಭಾಗ್ಯ ನಾರಾಯಣನು ।
ನಮ್ಮ ನಿಮ್ಮ ಭಾಗ್ಯದೊಡೆಯ ಪುರಂದರ ವಿಠಲನು ॥೫॥

♣ ರಾಗ – ಪೂರ್ವಿ ತಾಳ – ಅಟ್ಟತಾಳ

ಅಲ್ಲಿದೆ ನಮ್ಮನೆ ಇಲ್ಲಿ ಇರುವುದು ಸುಮ್ಮನೆ ।
ಕದ ಬಾಗಿಲಿರಿಸಿದ ಕಳ್ಳ ಮನೆ ಇದು
ಮುದದಿಂದ ಲೋಲಾಡೊ ಸುಳ್ಳು ಮನೆ॥
ಇದಿರಾದಿ ವೈಕುಂಠವಾಸ ಮಾಡುವಂಥ
ಪದುಮನಾಭನ ದಿವ್ಯ ಬದುಕು ಮನೆ ॥೧॥
ಮಾಳಿಗೆ ಮನೆಯೆಂದು ನೆಚ್ಚಿ ಕೆಡಲುಬೇಡ
ಕೇಳಯ್ಯ ಹರಿಕಥೆ ಶ್ರವಣಂಗಳ ॥
ನಾಳೆಮದೂತರು ಬಂದೆಳೆದೊಯ್ವಾಗ
ಮಾಳಿಗಿ ಮನೆ ಸಂಗಡ ಬಾರದಯ್ಯ ॥೨॥
ಮಡದಿ ಮಕ್ಕಳೆಂಬೊ ಹಂಬಲ ನಿನಗೇಕೋ ।
ಕಡುಗೊಬ್ಬುತನದಲಿ ನಡೆಯದಿರು ॥
ಒಡೆಯ ಶ್ರೀ ಪುರಂದರ ವಿಠಲನ ಚರಣವ ।
ಧೃಢಭಕ್ತಿಯಲಿ ನೀ ಭಜಿಸೆಲೋ ಮನುಜ ॥೩॥

♣ ರಾ ಗ – ಆ ರ ಭಿ : ತಾ ಳ – ಅ ಟ ತಾ ಳ

ಗಂಗಾದಿ ಸಕಲ ತೀರ್ಥಂಗಳಿಗಧಿಕ ಶ್ರೀಹರಿಯ ನಾಮ । ಪ ।

ಹಿಂಗದೆ ನೆನೆವರಿಗೆ ಮಂಗಳ ಫಲವೀವ ಹರಿಯ ನಾಮ । ಅಪ ।

ಸ್ನಾನ ಜಪಂಗಳ ಸಾಧಿಸದವನಿಗೆ ಹರಿಯ ನಾಮ
ಜ್ಞಾನವನರಿಯದ ಮೂಢಾತ್ಮನಿಗೆ ಹರಿಯ ನಾಮ । ೧ ।

ವೇದಶಾಸ್ತ್ರಂಗಳನೋದದ ಮನಜಗೆ ಹರಿಯ ನಾಮ

ಸಾಧನಗಳ ನಾಲ್ಕು ಸಾಧಿಸದವನಿಗೆ ಹರಿಯ ನಾಮ ।೨।

ಕಾಲನ ದೂತರ ತರಿದು ಬಿಸಾಡುವುದು ಹರಿಯ ನಾಮ
ಲೋಲ **ಶ್ರೀಪುರಂದರವಿಟ್ಠಲ**ನ ಒಲುಮೆಗೆ ಹರಿಯ ನಾಮ ।೩।

**♣ ರಾಗ : ಮುಖಾರಿ, ಝಂಪೆತಾಳ**

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ ।
ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ ॥ ಪ ॥

ದಿವ ರಾತ್ರಿಯೆನ್ನದೆ ವಿಷಯಲಂಪಟನಾಗಿ ।
ಸವಿಯೂಟಗಳನುಂಡು ಭ್ರಮಿಸಬೇಡ ।
ಅವನ ಕೊಂದಿವನ ಕೊಂದರ್ಥವನು ಗಳಿಸುವೊಡೆ ।
ಜವನದೂತರು ಬರುವ ಹೊತ್ತು ನೀನರಿಯೆ ॥ ೧ ॥

ಮೊನ್ನೆ ಮದುವೆಯನಾದೆ ಕರೆವುದೊಂದೆರಡೆಮ್ಮೆ ।
ನಿನ್ನೆ ಕೊಂಡೆನು ಕ್ಷೇತ್ರ ಫಲವು ಬಹುದು ।
ಹೊನ್ನು ಹಣವುಂಟೆನಗೆ ಸಾಯಲಾರೆನು ಎನಲು ।
ಬೆನ್ನು ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮಾ ॥ ೨ ॥

ಹೊಸ ಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ ।
ಬಸುರಿ ಹೆಮ್ಡತಿ ಮಗನ ಮದುವೆ ನಾಳೆ ।
ಹಸನಾಗಿ ಇದೆ ಬದುಕು ಸಾಯಲಾರೆನು ಎನಲು ।
ಕುಸುರಿದರಿಯದೆ ಬಿಡರು ಯಮನವರು ಆಗ ॥ ೩ ॥

ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ ।
ಮತ್ತೊಬ್ಬ ಮಗನ ಉಪನಯನ ನಾಳೆ ।
ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು ।
ಮೃತ್ಯು ಹೆಡತಲೆಯಲ್ಲಿ ನಗುತಿರ್ಪುದರಿಯೆ ॥ ೪ ॥

ಅಟ್ಟಡಿಗೆಯುಣಲಿಲ್ಲ ಇಷ್ಟ ದರುಶನವಿಲ್ಲ ।
ಕೊಟ್ಟ ಸಾಲದ ಕೇಳ್ವ ಹೊತ್ತನರಿಯೆ ।
ಕಟ್ಲೆ ತುಂಬಿದಮೇಲೆ ಕ್ಷಣಮಾತ್ರ ಇರಲಿಲ್ಲ ।
ಅಷ್ಟರೊಳು **ಪುರಂದರವಿಠಲ**ನೆನು ಮನವೆ ॥ ೫ ॥

♦ **ರಾಗ : ಷಣ್ಮುಖಪ್ರಿಯ , ಆದಿತಾಳ**

ಯಾರೆ ಬಂದವರು ಮತ್ತಿನ್ಯಾರೇ ಬಂದವರು ॥ ಪ ॥
ನಾರಾಯಣ ಕೃಷ್ಣನಾಥನಲ್ಲದೆ ಬೇರೆ ॥ ಅ.ಪ ॥
ಹೆಜ್ಜೆ ಹೊಸದಾಗಿದೆ ಮನೆಯೊಳಗೆಲ್ಲ । ಸೆಜ್ಜೆಯ ಮನೆಯೊಳು ಸದ್ದಾಯಿತಲ್ಲ ।
ವಜ್ರಹಾರಗಳೆಲ್ಲ ಕಿತ್ತು ಚೆಲ್ಲಿದೆ ನೋಡೆ । ಮಜ್ಜಿಗೆಯೊಳಗಿಹ ಬೆಣ್ಣೆಯ ಕಾಣೆ ॥ ೧ ॥
ಹಾಲಹರವಿಯು ಅರೆವಾಸಿಯಾಗಿದೆ । ಹಾಲುಗಡಿಗೆಯೊಡೆದು ಹರಿಯುತಲಿಹುದು ।
ಬಾಲರ ತೊಟ್ಟಿಲು ಚದರಿಹುದಲ್ಲಿ । ದೇವರ ಕದವು ತೆರೆದು ರಂಜಿಪುದು ॥ ೨ ॥
ಹಿಂದೆ ನಾ ಮಾಡಿದ ಪುಣ್ಯದ ಫಲದಿಂದ । ಇಂದು ನಾ ಕಂಡೆನು ಬಾಲಕೃಷ್ಣನ ।
ಮಂದಗಮನೆಯರು ಎತ್ತಿಕೊಂಡಾಡುವ । ಚಂದದ **ಪುರಂದರವಿಠಲ**ನಲ್ಲದೆ ಬೇರಿನ್ನು ॥ ೩ ॥

♣ **ರಾಗ : ಕಲ್ಯಾಣಿ, ಅಟ್ಟತಾಳ**

ಅಂಬೆಗಾಲಿಕ್ಕುತಲಿ ಬಂದ ಗೋವಿಂದ ॥ ಪ ॥
ಅಂಬುಜನಾಭ ದಯದಿಂದ ಎನ್ನ ಮನಗೆ ॥ ಅ.ಪ ॥

ಜಲಚರ ಜಲವಾಸ ಧರಣಿಧರ ಮೃಗರೂಪ ।
ನೆಲನಳೆದು ಮೂರಡಿ ಮಾಡಿ ಬಂದ ।
ಕುಲನಾಶ ವನವಾಸ ನವನೀತ ಚೋರನಿವ ।
ಲಲನೆಯರ ವ್ರತಭಂಗ ವಾಹನತುರಂಗ ॥ ೧ ॥

ಕಣ್ಣಬಿಡುವನು ತನ್ನ ಬೆನ್ನತಗ್ಗಿಸುವನು ।
ಮಣ್ಣುಕೆದರಿ ಕೋರೆ ಬಾಯಿತೆರೆದು ।
ಚಿಣ್ಣಭಾರ್ಗವ ಲಕ್ಷ್ಮಣ ಅಣ್ಣ ಬೆಣ್ಣೆಯ ಕಳ್ಳ ।
ಮಾನವ ಬಿಟ್ಟು ಕುದುರೆಯನೇರಿದ ॥ ೨ ॥

ನೀರಪೊಕ್ಕನು ಗಿರಿಯನೆಗಹಿ ಧರಣಿಯ ತಂದ ।
ನರಮೃಗ ಬಲಿಬಂಧ ಕೊರಳುಗೊಯಿಕ ।
ಶರಮುರಿದೊರಳೆಳೆದು ನಿರವಾಣ ಹಯ ಹತ್ತಿ ।
**ಪುರಂದರವಿಠಲ** ಮನೆಗೆ ತಾ ಬಂದ ॥ ೩ ॥

[ವಿಶೇಷ : ದಶಾವತಾರದ ಕೀರ್ತನೆ ಇದು. ವಿಶೇಷವೆಂದರೆ ಪ್ರತಿ ನುಡಿಯಲ್ಲಿ ಹತ್ತೂ ಅವತಾರಗಳ ಪ್ರಸ್ತಾಪ ಬರುತ್ತದೆ. ನೆಲನಳಿದು ಮೂರಡಿ ಮಾಡಿ . ವಾಮನ ಅವತಾರ]

ϖ ರಾ ಗ – ರೇ ಗು ಪ್ತಿ : ತಾ ಳ – ಝ ಂ ಪೆ ತಾ ಳ

ಅಂಜಬೇಡ ಬೇಡೆಲೊ ಜೀವ । ಭವ–
ಭಂಜನ ಹರಿ ಶರಣರ ಕಾವ । ಪ ।

ಬಂದ ಕಷ್ಟಗಳೆಲ್ಲ ತಾಳಿಕೊ । ಬಲು
ಸಂದೇಹ ಬಂದಲ್ಲಿ ಕೇಳಿಕೊ ॥
ನಿಂದಾಸ್ತುತಿಗಳ ತಾಳಿಕೊ । ಗೋ–
ವಿಂದ ನಮ್ಮವನೆಂದು ಹೇಳಿಕೊ । ೧ ।

ಮಾಧವನಿಗೆ ತನುಮನ ಮೆಚ್ಚು । ಕ್ರೋಧ
ರೂಪದ ಮಾಯಿಗಳ ಕಚ್ಚು ॥
ಮೋದತೀರ್ಥರ ಪಾದವೆ ಹೆಚ್ಚು । ಮಾಯ–
ವಾದಿಮತಕ್ಕೆ ಬೆಂಕಿಯ ಹಚ್ಚು । ೨ ।

ಪರನಾರಿಯರ ಆಸೆಯ ಬಿಡು । ನೀನು
ಪರಮಾತ್ಮನ ಧ್ಯಾನವ ಮಾಡು ॥
ಹರಿ ಸರ್ವೋತ್ತಮನೆಂದು ಕೊಂಡಾಡು ।
ಪುರಂದರವಿಟ್ಠಲನ ಮೂರ್ತಿಯ ನೋಡು । ೩ ।

**ϖ ರಾಗ : ಕಾನಡ , ಅಟ್ಟತಾಳ**

ಅನುಗಾಲವು ಚಿಂತೆ ಜೀವಕ್ಕೆ ತನ್ನ । ಮನವು ಶ್ರೀರಂಗನೊಳ್ ಮೆಚ್ಚುವ ತನಕ ॥ಪ ॥
ಸತಿಯು ಇದ್ದರು ಚಿಂತೆ ಸತಿಯು ಇಲ್ಲದ ಚಿಂತೆ । ಮತಿಹೀನ ಸತಿಯಾದರು ಚಿಂತೆಯು ।
ಪೃಥಿವಿಯೊಳಗೆ ಸತಿ ಅತಿ ಚೆಲ್ವೆಯಾದರೆ । ಮಿತಿ ಮೀರೆಯಿಲ್ಲದ ಮೋಹದ ಚಿಂತೆ ॥ ೧ ॥

ಪುತ್ರರಿದ್ದರು ಚಿಂತೆ ಪುತ್ರರಿಲ್ಲದ ಚಿಂತೆ । ಅತ್ತು ಅನ್ನಕೆ ಕಾಡುವ ಚಿಂತೆಯು ।
ತುತ್ತಿನ ಆಸೆಗೆ ತುತುಗಳ ಕಾಯ್ದರು । ಸುತ್ತೇಳು ಕಡೆಯಿಲ್ಲದ ಚಿಂತೆಯು ॥ ೨ ॥
ಬಡವನಾದರು ಚಿಂತೆ ಬಲಿದನಾದರು ಚಿಂತೆ । ಹಿಡಿ ಹೊನ್ನು ಕೈಯೊಳಿದ್ದರು ಚಿಂತೆಯು ।
ಪೊಡವಿಯೊಳಗೆ ಸಿರಿ **ಪುರಂದರವಿಠಲ**ನ । ಬಿಡದೆ ಧ್ಯಾನಿಸಿದರೆ ಚಿಂತೆ ನಿಶ್ಚಿಂತೆ ॥ ೩ ॥

**೮ ರಾಗ : ಶಂಕರಾಭರಣ , ಅಟ್ಟತಾಳ**

ಅಂಬಿಗ ನಾ ನಿನ್ನ ನಂಬಿದೆ ಜಗ– ।
ದಂಬಾರಮಣ ನಿನ್ನ ನಂಬಿದೆ ॥ ಪ ॥

ತುಂಬಿದ ಹರಿಗೋಲಂಬಿಗ ಅದ– ।
ಕೊಂಬತ್ತು ಛಿದ್ರ ನೋಡಂಬಿಗ ।
ಸಂಭ್ರಮದಿಂದ ನೀನಂಬಿಗ ಅದ– ।
ರಿಂಬು ನೋಡಿ ನಡೆಸಂಬಿಗ ॥ ೧ ॥

ಹೊಳೆಯ ಅಬ್ಬರ ನೋಡಂಬಿಗ ಅದಕೆ ।
ಸೆಳವು ಘನವಯ್ಯ ಅಂಬಿಗ ।
ಸುಳಿಯೊಳು ಮುಳುಗಿದೆ ಅಂಬಿಗ ಎನ್ನ ।
ಸೆಳೆದುಕೊಂಡೊಯ್ಯೊ ನೀನಂಬಿಗ ॥ ೨ ॥
ಆರು ತೆರೆಯ ನೋಡಂಬಿಗ ಅದು ।
ಮೀರಿ ಬರುತಲಿದೆ ಅಂಬಿಗ ।
ಯಾರಿಂದಲಾಗದು ಅಂಬಿಗ ಅದ ನಿ– ।
ವಾರಿಸಿ ದಾಟಿಸೊ ಅಂಬಿಗ ॥ ೩ ॥

ಹೊತ್ತು ಹೋಯಿತು ನೋಡಂಬಿಗ, ಅಲ್ಲಿ ।
ಮತ್ತೈವರೀರ್ವರು ಅಂಬಿಗ ।
ಒತ್ತಿ ನಡೆಸು ನೋಡಿ ಅಂಬಿಗ ಎನ್ನ ।
ಸತ್ಯಲೋಕಕೆ ಒಯ್ಯೊ ಅಂಬಿಗ ॥ ೪ ॥

ಸತ್ತ್ವಪಥದೊಳಗಂಬಿಗ ಪರಾ– ।
ಭಕ್ತಿ ಹುಟ್ಟನು ಹಾಕಿ ಅಂಬಿಗ ।
ಮುಕ್ತಿದಯಕ ನಮ್ಮ **ಪುರಂದರವಿಠಲ** ।
ಮುಕ್ತಿಮಂಟಪಕೊಯ್ಯೊ ಅಂಬಿಗ     ॥ ೫ ॥

ಠ **ರಾಗ : ಸಿಂಧುಭೈರವಿ , ಝಂಪೆತಾಳ**

ಏಕೆ ಚಿಂತಿಸುತಿರುವಿ ಬರಿದೆ ಮನವೆ     । ಪ ।
ಲೋಕನಾಥನ ನೆನೆದು ಸುಖಿಯಾಗು ಮನವೆ     ॥ ಅ. ಪ ॥

ಹುಟ್ಟುವಾಗಾಪತ್ತಿಗಾರು ಚಿಂತಿಸಿದವರು ।
ಕಟ್ಟ ಕಡೆಯಲಿ ಲಯಕೆ ಯಾರ ಚಿಂತೆ ।
ನಟ್ಟ ನಡುವಿನ ಬಾಳಿಗೇಕೆ ಚಿಂತಿಸುತಿರುವೆ ।
ಹುಟ್ಟಿದವರಿಗೆ ಮೂರು ಬಟ್ಟಿಲ್ಲವೆ ಮರುಳೆ     ॥ ೧ ॥

ನವಿಲಿಗೆ ಚಿತ್ರಪತ್ರವನಾರು ಬರೆದವರು ।
ಹವಳದಾ ಲತೆಗೆ ಕೆಂಪಿಟ್ಟವರು ಯಾರು ।
ಸವಿಮಾತಿನರಗಿಣಿಗೆ ಹಸುರು ಬಳಿದವರಾರು ।
ಆವ ಮಾಡಿದವ ನಮ್ಮ ಮರೆತಿಹನೆ ಮರುಳೆ     ॥ ೨ ॥

ಬಸಿರೊಳಗೆ ಶಿಶುವನು ಅದಾರು ಸಲಹಿದವರು ।
ವಸುಧೆಯನು ಬಸಿರೊಳಿಟ್ಟಿರುವರಾರು ।
ಹಸಗೆಡದೆ ನಮ್ಮ ಶ್ರೀ**ಪುರಂದರವಿಟ್ಠಲ**ನ ।
ಬಿಸಜಪಾದವ ನಂಬಿ ಸುಖಿಯಾಗು ಮರುಳೆ     ॥ ೩ ।

ಠ **ರಾಗ : ಮೋಹನ ,          ಝಂಪೆತಾಳ**

ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕಿಂತ ।
ಸುಜ್ಞಾನಿಗಳ ಕೂಡೆ ಜಗಳವೇ ಲೇಸು     ॥ ಪ ॥

ಉಂಬುಡುವುದಕ್ಕಿರುವ ಅರಸನೋಲಗಕಿಂತ ।
ತುಂಬಿದೂರೊಳಗೆ ತಿರಿದುಂಬುವುದೆ ಲೇಸು ।
ಹಂಬಲಿಸಿ ಹಾಳು ಹರಟೆ ಹೊಡೆವುದಕಿಂತ ।
ನಂಬಿ ಹರಿದಾಸರೊಳು ಪೊಂದಿ ಹಾಡುವುದೆ ಲೇಸು ॥ ೧ ॥

ಒಡನೆ ಹಂಗಿಸುವವನ ಪಾಲೋಗರಕ್ಕಿಂತ ।
ಕುಡಿ ನೀರು ಕುಡಿದುಕೊಂಡಿಹುದೆ ಲೇಸು ।
ಬಿಡದೆ ಬಡಿದಾಡುವವರ ನೆರೆಯಲಿಹುದಕ್ಕಿಂತ ।
ಅಡವಿಯೊಳಗಜ್ಞಾತವಾಸವೇ ಲೇಸು ॥ ೨ ॥

ಮಸೆದು ಮತ್ಸರಿಪ ಸತಿಯೊಡನೆ ಸಂಸಾರಕ್ಕಿಂತ ।
ಹಸನಾದ ಹಾಳು ಗುಡಿಯೆ ಲೇಸು ।
ಬಿಸಜಾಕ್ಷ **ಪುರಂದರವಿಟ್ಠಲ**ನ ನೆನೆನೆನೆದು ।
ವಸುಧೆಯೊಳು ಚಿರಕಾಲವಿರುವುದೆ ಲೇಸು ॥ ೩ ॥

- ರಾಗ : ಕಲ್ಯಾಣಿ , ತ್ರಿವಿಡೆತಾಳ

ಅಂದಿಂದ ನಾ ನಿನ್ನ ನೆರೆ ನಂಬಿದೆನೊ ಕೃಷ್ಣ ॥ ಪ ॥
ತಂದೆ ಗೋವಿಂದ ಮುಕುಂದ ನಂದನ ಕಂದ ॥ ಅ.ಪ ॥
ಬಲವಂತನುತ್ತಾನಪಾದರಾಯನ ಕಂದ । ಬಲತಾಯಿ ನೂಕಲು ಅಡವಿಯೊಳು ।
ಜಲಜಾಕ್ಷ ನಿನ್ನ ಕುರಿತು ತಪವಿರಲಾಗಿ । ಒಲಿದು ಧ್ರುವಗೆ ಪಟ್ಟಗಟ್ಟಿದ್ದು ಕೇಳಿ ॥ ೧ ॥
ನಕ್ರಂಗೆ ಗಜರಾಜ ಸಿಕ್ಕು ಸರಸಿಯೊಳು । ದುಃಖದಿ ಶ್ರೀಹರಿಯೆ ಸಲಹೆನ್ನಲು ।
ಚಕ್ರದಿ ನೆಗಳ ಕಂಠವ ತರಿದು ಭಕ್ತನ । ವಕ್ರವ ಪರಿದಾದಿಮೂಲನೆಂವುದ ಕೇಳಿ ॥ ೨ ॥
ದ್ರುಪದನ ಸುತೆಯ ದುಶ್ಶಾಸನ ಸಭೆಯೊಳು । ಕಪಟದಿ ಸೀರೆಯ ಸೆಳೆಯುತಿರೆ ।
ಸುಪರ್ಣವಾಹನ ಕೃಷ್ಣ ಸಲಹೆಂದು ಅಬಲೆಯ ।
ಅಪಮಾನದಿಂ ಕಾಯ್ದ ಶ್ರೀಹರಿಯೆಂಬುದ ಕೇಳಿ ॥ ೩ ॥
ಹರಿನರಾಯಣನೆಂದು ಪ್ರಹ್ಲಾದ ಒರೆಯಲು । ದುರುಳ ದಾನವನವನೊಳು ಮುನಿದು ।
ಕರೆ ನಿನ್ನ ಒಡೆಯನ ಎಂದು ಗರ್ಜಿಸಿ ನರ– ।
ಹರಿ ಬಂದು ಒಡನೆಯೆ ಕಾಯ್ದನೆಂಬುದ ಕೇಳಿ ॥ ೪ ॥
ಅಂಬರೀಷಗೆ ದೂರ್ವಾಸ ಶಾಪವ ಕೊಡೆ । ಅಂಬುಜಲೋಚನ ಚಕ್ರದಿಂದ ।

ಬೆಂಬತ್ತಿ ಮುನಿಯ ಶಾಪವ ಪರಿಹರಿಸಿದ । ಕಂಬು ಚಕ್ರಧರ ಹರಿಯೆಂಬುದ ಕೇಳಿ ॥ ೫ ॥
ಛಲ ಬೇಡ ರಾಮನ ಲಲನೆಯ ಬಿಡುಯೆಂದು । ತಲೆ ಹತ್ತರವಗೆ ಪೇಳಲು ತಮ್ಮನ ।
ಬಳಲಿಸಿ ಹೊರಡಿಸಲವ ನಿನ್ನ ಮೊರೆ ಹೊಗೆ ।
ಸಲೆ ವಿಭೀಷಣಗೆ ಲಂಕೆಯನ್ನಿತ್ತುದ ಕೇಳಿ ॥ ೬ ॥
ಸುರ ನರ ನಾಗಲೋಕದ ಭಕ್ತ ಜನರನ್ನು । ಪೊರೆಯಲೋಸುಗ ವೈಕುಂಠದಿಂದ ।
ಸಿರಿಸಹಿತಲೆ ಬಂದು ಶೇಷಾಚಲದಿ ನಿಂತ ।
**ಪುರಂದರವಿಠಲ** ನಿನ್ನಯ ಚರಣವ ಕಂಡು ॥ ೭ ॥

**೮ ರಾಗ : ಕಾಂಬೋದಿ , ಆದಿತಾಳ**

ಅಂಗನೆಯರೆಲ್ಲ ನೆರೆದು ಚಪ್ಪಾಳಿಕ್ಕುತ ದಿವ್ಯ ॥ ಪ ॥
ಮಂಗಳ ನಾಮವ ಪಾಡಿ ರಂಗನ ಕುಣಿಸುವರು ॥ ಅ.ಪ ॥

ಪಾಡಿ ಮಲಹರಿ ಭೈರವಿ ಸಾರಂಗಿ ದೇಶಿ ।
ಗುಂಡುಕ್ರಿಯ ಗುರ್ಜರಿ ಕಲ್ಯಾಣಿ ರಾಗದಿ ।
ತಂಡ ತಂಡದಲಿ ನೆರೆದು ರಂಗನ ಉಡಿಯ ಘಂಟೆ ।
ಢಂಢಣಢಣಿರೆಂದು ಹಿಡಿದು ಕುಣಿಸುವರು ॥ ೧ ॥

ತಿತ್ತಿರಿ ಮೌಳಿ ತಾಳ ದಂಡಿಗೆ ಮದ್ದಲೆ ।
ಉತ್ತಮದ ಶಂಖ ಶಬ್ದ ನಾದಗಳಿಂದ ।
ಸುತ್ತ ಮುತ್ತಿ ನಾರಿಯರು ಥೈ ತಥೈ ಥಾಯೆಂದು ।
ಅರ್ತಿಯಿಂದ ಕುಣಿಸುವರು ಪರವಸ್ತವ ಹಿಡಿದು ॥ ೨ ॥

ಕಾಮಿನಿಯರೆಲ್ಲ ನೆರೆದು ಕಂದನೊಡನಾಟವಾಡಿ ।
ಪ್ರೇಮದಿಂ ಬಿಗಿ ಬಿಗಿದಪ್ಪಿ ಮುದ್ದಾಡಿ ।
ಕಾಮಿತ ಫಲವೀವ ಭಕುತಜನರೊಡೆಯ ।
ಸ್ವಾಮಿ ಶ್ರೀ **ಪುರಂದರವಿಠಲ**ರಯನ್ನ ॥ ೩ ॥

ಯ ರಾಗ – ಸಾವೇರಿ : ತಾಳ – ಅಟತಾಳ

ನಿನ್ನನೇ ನಂಬಿದೆನೊ ನೀನೆನ್ನ ಸಲಹಯ್ಯ ।ಪ।
ಎನ್ನ ಗುಣ ದೋಷಗಳ ಎಣಿಸಬೇಡಯ್ಯ ।ಅ ಪ।

ಬಾಲ್ಯದಲಿ ಕೆಲವು ದಿನ ಬರಿದೆ ಹೋಯಿತು ಹೊತ್ತು
ಮೇಲೆ ಯೌವನ ಮದದಿ ಮುಂದರಿಯದಿದ್ದೆ
ಜಾಲ ಸಂಸಾರದಲಿ ಸಿಲುಕಿ ಬಳಲಿದೆನಯ್ಯ
ಪಾಲಿಸೊ ಪರಮಾತ್ಮ ಭಕ್ತಿಯ ಕೊಟ್ಟು ।೧।

ಆಸೆಯೆಂಬುದು ಅಜನ ಲೋಕವನು ಮುಟ್ಟುತಿದೆ
ಬೇಸರದು ಸ್ತ್ರೀಯರಲಿ ಬುದ್ಧಿಯೆನಗೆ
ವಾಸುದೇವನ ಸ್ಮರಣೆ ಒಮ್ಮೆಯಾದರು ಇಲ್ಲ
ಕ್ಲೇಶವನು ಬಿಡಿಸಿ ನಿನ್ನ ದಾಸನೆನಿಸಯ್ಯ ।೨।

ಈ ತೆರದಿ ಕಾಲವನು ಇಂದಿರೇಶನೆ ಕಳೆದೆ
ಭೀತಿಯಿಲ್ಲದೆ ಜ್ಞಾನರಹಿತನಾಗಿ
ಮಾತೆ ತನ್ನಯ ಶಿಶುವ ಮನ್ನಿಸುವ ತೆರನಂತೆ
ದಾತ **ಪುರಂದರವಿಟ್ಠಲ** ದಯಮಾಡಿ ಸಲಹೊ ।೩।

ಯ ರಾಗ – ಆನಂದಭೈರವಿ : ತಾಳ – ಆದಿತಾಳ

ಇಂದು ನಿನ್ನ ಮೊರೆಯ ಹೊಕ್ಕೆ ವೆಂಕಟೇಶನೆ
ಎಂದಿಗಾದರೆನ್ನ ಕಾಯೊ ಶ್ರೀನಿವಾಸನೆ ।ಪ।

ಶೇಷಗಿರಿಯ ವಾಸ ಶ್ರೀಶ ದೋಷರಹಿತನೆ
ಏಸು ದಿನಕು ನಿನ್ನ ಪಾದ ದಾಸನು ನಾನೆ
ಕ್ಲೇಷ ಗೈಸದಿರು ಎನ್ನ ಸ್ವಾಮಿಯು ನೀನೆ
ಏಸು ದಿನಕು ನಿನ್ನ ಪಾದ ದಾಸನು ನಾನೇ ।೧।

ಕಮಲನಯನ ಕಾಮಜನಕ ಕರುಣವಾರಿಧೆ
ರಮೆಯನಾಳ್ವ ಕಮಲನಾಭ ಹೇ ದಯಾನಿಧೆ
ಯಮನ ಪುರದಿ ಶಿಕ್ಷಿಸದಿರು ಪಾರ್ಥಸಾರಥೆ
ರಮೆಯ ನಾಳ್ವ ಕಮಲನಾಭ ಹೇ ದಯಾನಿಧೆ ।೨।

ಉರಗಶಯನ ಸುರರಿಗೊಡೆಯ ಸಿರಿಯ ರಮಣನೆ
ಶರಣಪಾಲ ಬಿರುದು ತೋರಿ ಪೊರೆವದೇವನೆ

ಕರುಣಿಸೆನಗೆ ಮುಕುತಿಯನ್ನು **ಪುರಂದರವಿಟ್ಠಲನೆ**
ಶರಣಪಾಲ ಬಿರುದು ತೋರಿ ಪೊರೆವದೇವನೆ ।೩।

ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಡಂಗುರವ ಸಾರಿರಯ್ಯ ಡಿಂಗರಿಗರೆಲ್ಲರು । ಭೂ–
ಮಂಡಲಕ್ಕೆ ಪಾಂಡುರಂಗ ವಿಟ್ಠಲನೇ ಪರದೈವವೆಂದು ।ಪ।
ಹರಿಯು ಮುಡಿದ ಹೂವು ಹರಿವಾಣದೊಳಗಿಟ್ಟುಕೊಂಡು
ಹರುಷದಿಂದ ಹಾಡಿ ಪಾಡಿ ಕುಣಿದು ಚಪ್ಪಾಳಿಕ್ಕುತ ।೧।

ಒಡಲು ಜಾಂಗಟೆಯ ಮಾಡಿ ನುಡಿವ ನಾಲಿಗೆಯ ಪಿಡಿದು
ಬಿಡದೆ ಢಂ ಢಂ ಡಣಾಢಣಾರೆಂದು ಹೊಡೆದು ಚಪ್ಪಾಳಿಕ್ಕುತ ।೨।

ಇಂತು ಜಗಕ್ಕೆಲ್ಲ ಲಕ್ಷ್ಮೀಕಾಂತನಲ್ಲದಿಲ್ಲವೆಂದು
ಸಂತತ ಶ್ರೀ **ಪುರಂದರವಿಟ್ಠಲ**ನೇ ಪರದೈವವೆಂದು ।೩।

ರಾಗ – ಪೂರ್ವಿ : ತಾಳ – ಏಕತಾಳ

ಬಿಡಬ್ಯಾಡಿ ಬಿಡಬ್ಯಾಡಿ
ಮಧ್ವಮತದ ಸಿದ್ಧಾಂತದ ಪದ್ಧತಿ ।ಪ।

ಬಿಟ್ಟು ಕೆಡಬ್ಯಾಡಿ ಕೆಡಬ್ಯಾಡಿ ।ಅ ಪ।

ಹರಿಸರ್ವೋತ್ತಮನಹುದೆಂಬೊ ಜ್ಞಾನವ
ತಾರತಮ್ಯದಿಂದ ತಿಳಿಸೋ ಮಾರ್ಗವ ।೧।

ಘೋರಯಮನ ಭಯ ದೂರ ಓಡಿಸಿ
ಮುರಾರಿಯ ಚರಣವ ತೋರೋ ಮಾರ್ಗವ ।೨।

ಭಾರತೀಶ ಮುಖ್ಯ ಪ್ರಾಣಾಂತರ್ಗತ
ನೀರಜಾಕ್ಷ ನಮ್ಮ **ಪುರಂದರವಿಟ್ಠಲನ** ।೩।

ಌ ರಾ ಗ – ಜೋ ಗಿ : ತಾ ಳ – ಆ ದಿ ತಾ ಳ

ವಿಟ್ಠಲ ಸಲಹೊ ಸ್ವಾಮಿ ನಮ್ಮ ವಿಟ್ಠಲ ಜಗದಂತರ್ಯಾಮಿ ।ಪ।

ಎಡಕೆ ವಿಟ್ಠಲ ಬಲಕೆ ವಿಟ್ಠಲ ಎಡಕೆ ಬಲಕೆ ವಿಟ್ಠಲ ।೧।

ತಂದೆ ವಿಟ್ಠಲ ತಾಯಿ ವಿಟ್ಠಲ ತಂದೆ ತಾಯಿ ವಿಟ್ಠಲ ।೨।

ಬಂಧು ವಿಟ್ಠಲ ಬಳಗ ವಿಟ್ಠಲ ಬಂಧುಬಳಗ **ಪುರಂದರವಿಟ್ಠಲ** ।೩।

ಌ ರಾ ಗ – ಮು ಖಾ ರಿ : ತಾ ಳ – ಅ ಟ ತಾ ಳ

ಜಯ ಮಂಗಳಂ । ನಿತ್ಯ ಶುಭ ಮಂಗಳಂ ।ಪ।

ಇಂದೀವರಾಕ್ಷಗೆ ಇಭರಾಜವರದಗೆ
ಇಂದಿರಾರಮಣ ಗೋವಿಂದ ಹರಿಗೆ
ನಂದನಕಂದಗೆ ನವನೀತ ಚೋರಗೆ
ವೃಂದಾರಕೇಂದ್ರ ಉಡುಪಿಯ ಕೃಷ್ಣಗೆ ।೧।

ಕ್ಷೀರಾಬ್ಧಿವಾಸಗೆ ಕ್ಷಿತಿಜನರ ಪಾಲಗೆ
ಮಾರನಪಿತಗೆ ಮಂಗಳಮೂರ್ತಿಗೆ
ಚಾರುಚರಣದಿಂದ ಚೆಲುವ ಗಂಗೆಯ ಪಡೆದ
ಕಾರುಣ್ಯಮೂರ್ತಿ ಕೌಸ್ತುಭಧಾರಿಗೆ ।೨।

ವ್ಯಾಸಾವತಾರಗೆ ವೇದ ಉದ್ಧಾರಗೆ
ವಾಸಿತಾನಂತಪದ ಸಕಲೇಶಗೆ
ವಾಸುದೇವಮೂರ್ತಿ **ಪುರಂದರವಿಟ್ಠಲಗೆ**
ದಾಸರಾ ಕಾಯ್ವ ರುಕ್ಮಿಣೀರಮಣಗೆ ।೩।

ಥ ರಾಗ – ಶಂಕರಾಭರಣ : ತಾಳ – ತ್ರಿತಾಳ

ಜೋ ಜೋ ಶ್ರೀಕೃಷ್ಣ ಪರಮಾನಂದ
ಜೋ ಜೋ ಗೋಪಿಯ ಕಂದ ಮುಕುಂದ ಜೋ ಜೋ ।ಪ।

ಪಾಲಗಡಲೊಳು ಪವಡಿಸಿದವನೆ
ಆಲದೆಲೆಯ ಮೇಲೆ ಮಲಗಿದ ಶಿಶುವೆ
ಶ್ರೀಲತಾಂಗಿಯಳ ಚಿತ್ತದೊಲ್ಲಭನೆ
ಬಾಲ ನಿನ್ನನು ಪಾಡಿ ತೂಗುವೆನಯ್ಯ ಜೋ ಜೋ ।೧।

ಹೊಳೆವಂಥ ರನ್ನ ತೊಟ್ಟಿಲ ಮೇಲೆ
ಥಳಥಳಿಸುವ ಗುಲಗಂಜಿಯ ಮಾಲೆ
ಅಳದೆ ನೀ ಪಿಡಿದಾಡೆನ್ನಯ ಮುದ್ದುಬಾಲ
ನಳಿನನಾಭನೆ ನಿನ್ನ ಪಾಡಿ ತೂಗುವೆನು ಜೋ ಜೋ ।೨।

ಯಾರ ಕಂದ ನೀ ಯಾರ ನಿಧಾನಿ ನೀ
ಯಾರ ರತ್ನವೊ ನೀನಾರ ಮಾಣಿಕವೊ
ಸೇರಿತು ಎನಗೊಂದು ಚಿಂತಾಮಣಿಯೆಂದು
ಪೋರ ನಿನ್ನನು ಪಾಡಿ ತೂಗುವೆನಯ್ಯ ಜೋ ಜೋ ।೩।

ಗುಣನಿಧಿಯೆ ನಿನ್ನನ್ನೆತ್ತಿಕೊಂಡಿದ್ದರೆ
ಮನೆಯ ಕಲಸವಾರು ಮಾಡುವರಯ್ಯ
ಮನಕೆ ಸುಖ ನಿದ್ರೆಯ ತಂದುಕೊ ಬೇಗ
ಫಣಿಶಯನನೆ ನಿನ್ನ ಪಾಡಿ ತೂಗುವೆನು ಜೋ ಜೋ ।೪।

ಅಂಡಜವಾಹನ ಅನಂತ ಮಹಿಮ
ಪುಂಡರೀಕಾಕ್ಷ ಶ್ರೀ ಪರಮಪಾವನ್ನ
ಹಿಂಡು ದೈವದ ಗಂಡ ಉದ್ದಂಡನೆ
ಪಾಂಡುರಂಗ ಶ್ರೀ **ಪುರಂದರವಿಟ್ಠಲನೆ** ಜೋ ಜೋ ।೫।

------------------------------------------

೮                    ರಾ ಗ – ಸು ರ ಟಿ  :  ತಾ ಳ – ಝಂ ಪೆ ತಾ ಳ

ಶ್ರೀಪತಿಯು ನಮಗೆ ಸಂಪದವೀಯಲಿ । ಪ ।

ವಾಣೀಪತಿಯು ನಮಗೆ ದೀರ್ಘಾಯು ಕೊಡಲಿ । ಅ ಪ ।

ಸುರಗಣವನು ಪೊರೆಯೆ ವಿಷವ ಕಂಠದಲಿಟ್ಟ
ಹರ ನಮಗೆ ಸಹಾಯಕನಾಗಲಿ
ನರರೊಳುನ್ನತವಾದ ಭೋಗ ಭಾಗ್ಯಂಗಳನು
ಪುರುಹೂತ ಪೂರ್ಣ ಮಾಡಿಸಲಿ ನಮಗೆ । ೧ ।

ವಿನುತ ಸಿದ್ಧಿಪ್ರದ ವಿಘ್ನೇಶ ದಯದಿಂದ
ನೆನೆದ ಕಾರ್ಯಗಳೆಲ್ಲ ನೆರವೇರಲಿ
ದಿನದಿನದಿ ಅಶ್ವಿನಿಗಳಾಪತ್ತುಗಳ ಕಳೆದು
ಮನಕೆ ಹರುಷವನಿತ್ತು ಮನ್ನಿಸಲಿ ಬಿಡದೆ । ೨ ।

ನಿರುತ ಸುಜ್ಞಾನವನು ಈವ ಮಧ್ವರಾಯ
ಗುರುಗಳಾಶೀರ್ವಾದ ನಮಗಾಗಲಿ
**ಪುರಂದರವಿಟ್ಠಲನ** ಕರುಣೆಯಿಂದಲಿ ಸಕಲ
ಸುರರೊಲುಮೆ ನಮಗೆ ಸುಸ್ಥಿರವಾಗಲಿ । ೩ ।